
ಅಂತರಾತ್ಮನಿಗೆ



ಬರೆದವರು
ರಾಮಚಂದ್ರ ದಿವಾಕರ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ ಗ್ರಂಥಮಾಲೆ
ಹುಬ್ಬಳ್ಳಿ-ಬೆಂಗಳೂರು,
೧೯೮೮

ಅಂತರಾತ್ಮನಿಗೆ

(TO THE INNER SELF)

ಬರೆದವರು :

ರಂಗನಾಥ ರಾಮಚಂದ್ರ ದಿವಾಕರ

ಎಂ. ಎ., ಎಲ್. ಎಲ್. ಬಿ.

1988

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ, ಹುಬ್ಬಳ್ಳಿ

ಆರನೆಯ ಆವೃತ್ತಿ, ೧೯೮೮
ಪ್ರತಿಗಳು ೨೦೦೦

ಬೆಲೆ ರೂ. ೫-೦೦

ಪ್ರಕಾಶಕರು ;
ಲೋಕ ಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ – ಬೆಂಗಳೂರು

ಮುನ್ನುಡಿ

ಕಾಲ ಕಾಲಕ್ಕೆ ನನ್ನ ವೃತ್ತಿಯು ಅಂತರ್ಮುಖವಾದಾಗ ಒಳಗೆ ಮೂಡಿದ ಭಾವಗಳಿಗೆ ವ್ಯಕ್ತಸ್ವರೂಪವನ್ನು ಕೊಡಲೆತ್ನಿಸಲು ಅವು ಈ ರೂಪವನ್ನು ತಾಳಿವೆ. ಇವು ಎನ್ನಂತರಂಗದ ಒಳನುಡಿಗಳು, ಇಲ್ಲವೆ ತೊದಲ್ನುಡಿಗಳು ಎನ್ನಬಹುದು. ಅದೇಕೆ, ಇವು ತೊದಲ್ನುಡಿಗಳೇ— ಯಾಕೆಂದರೆ ಒಳಗಿನ ಆ ಸೂಕ್ಷ್ಮ ವಿವಿಧ ಭಾವನಾಟ್ಯವನ್ನು ಶಬ್ದಗಳಿಂದ ಸ್ಪಷ್ಟವಾಗಿ ಚಿತ್ರಿಸುವದು ಅಸಾಧ್ಯ. ಇವುಗಳನ್ನು ಬರೆಯುವಾಗ ನನಗೆ ಒಂದು ಬಗೆಯ ಸಮಾಧಾನವೂ ಆನಂದವೂ ಆಯಿತು. ಅದೇ ಬಗೆಯ ಸಮಾಧಾನವೂ ಆನಂದವೂ ನನ್ನಂತಹ ಸ್ವಭಾವವುಳ್ಳ ಜನರಿಗೆ ಆಗ ಬಹುದು ಎಂಬ ಆಶೆಯಿಂದ ಇವುಗಳನ್ನು ಪ್ರಕಟಿಸುತ್ತಿರುವೆನು. ಆ ಒಳ ಆನಂದವನ್ನಾದರೂ ನಾನೊಬ್ಬನೆ ಸವಿಯುವದು ಸ್ವಾರ್ಥವಲ್ಲವೆ?

ಈ ನಮ್ಮ ಪೃಥ್ವಿಗೂ ಸೂರ್ಯನಿಗೂ ಈಗಿದ್ದ ಸಂಬಂಧವು ಯಾವಾಗ ಪ್ರಾರಂಭಿಸಿತು. ಈ ನಮ್ಮ ಗೋಲವು ಈ ಖಗೋಲದಲ್ಲಿ ಸೂರ್ಯಮಂಡಲದ ಒಂದು ಗ್ರಹವಾಗಿ ಯಾವಾಗ ತಿರುಗಲಾರಂಭಿಸಿತು ಎಂಬುದನ್ನು ಐನಸ್ಟೀನನಂಥ ಗಣಿತಜ್ಞರು ಹುಡುಕಿ ತೆಗೆಯಬಹುದು. ಜಡಸೃಷ್ಟಿಯ ಕಣಕಣಗಳಲ್ಲಿ, ಅಣುರೇಣುಗಳಲ್ಲಿ ಇರುವ ಆಕರ್ಷಣ ಶಕ್ತಿಯು ಯಾವ ದಿನ ತನ್ನ ಕಾರ್ಯವನ್ನು ಮೊದಲು ಮಾಡಿತು ಇದನ್ನಾದರೂ ಲೆಕ್ಕದಿಂದ ಗೊತ್ತು ಹಿಡಿಯಬಹುದು. ಆದರೆ ಚೇತನ ಸಾಮ್ರಾಜ್ಯದಲ್ಲಿ ಜೀವ-ದೇವರಿಗಿದ್ದ ಸಂಬಂಧವು ಎಂದು, ಹೇಗೆ, ಏಕೆ ಹುಟ್ಟಿತು ಇದನ್ನು ಗೊತ್ತು ಹಿಡಿಯುವ ಗಣಿತೆಯು ಇನ್ನೂ ಹುಟ್ಟಿಲ್ಲ. ಈ ಸಂಬಂಧದಲ್ಲಿಯೆ ಅದನ್ನು ಅರಿತುಕೊಂಡು ಅದರಂತೆ ವರ್ತಿಸುವದ ರಲ್ಲಿಯೆ ಜೀವನ ಸೃಷ್ಟಿಯ ಗುಟ್ಟುಗುರಿಗಳು ಅಡಕವಾಗಿರುವವು. ನಮ್ಮ ಜೀವನವೆಲ್ಲ ಈ ಗುಟ್ಟನ್ನು ಬಿಚ್ಚಲು ಕೈಕೊಂಡ ಮಹಾಯಾತ್ರೆ ಇರು

ವದು. ಈ ಗುಟ್ಟಿನ ಮೂಲಕವೆ ಈ ನಮ್ಮ ಜೀವನಕ್ಕೆ ನಿತ್ಯ ಸಮೀಚೀ
ತ್ವವು. ಇದರಿಂದಲೆ ನಮ್ಮಲ್ಲಿ ನವೋತ್ಸಾಹವು. ತನ್ಮೂಲಕವೆ ನಮ್ಮಲ್ಲಿ
ಎಂದೆಂದೂ ತಣಿಯದ ಕುತೂಹಲವು ಉಂಟಾಗುವದು. ಆ ಗುಟ್ಟು
ಒಡೆದು ಸ್ಪಷ್ಟವಾದ ಕ್ಷಣವೆ ಆತ್ಮಾನಂದದ ಉಗಮವಾಗುವದು.
ತ್ರಿಕಾಲಗಳಳಿದು ಒಂದೇ ಒಂದು ಅಖಂಡ ವರ್ತಮಾನವು ಗೋಚರ
ವಾಗುವದು. ವಿಶ್ವನಾಟಕದ ಅಂತರಂಗವೆಲ್ಲ ತಿಳಿದು ಅತ್ಯಂತ ಸಮಾಧಾನ
ವಾಗುವದು. ಕೃತಾರ್ಥತೆಯು ಛಾಯೆದೋರಿ ಧನ್ಯಭಾವದ
ಅನುಭವವಾಗುವದು. ಈ ಅನುಭವವೆಂದರೆ ಜೀವನಯಾತ್ರೆಯ ಒಂದು
ದೊಡ್ಡ ಮೆಟ್ಟು. ಆದರೆ ಅದು ಕೊನೆಯಲ್ಲ. ಈ ಅನುಭವವೆಂದ
ರೊಂದು ಹೊಸ ಹಾಗೂ ದಿವ್ಯ ಜೀವನದ ಪ್ರಾರಂಭ! ಅದು ಮುಂದೆ
ನಿತ್ಯ ನೆಲೆಗೊಂಡಿತೆಂದರೆ ಅದೇ ಜೀವನದ ಪರಿಪೂರ್ತಿ ಎನ್ನಬಹುದು.
ಅದೇ ಸಹಜ ಸಮಾಧಿಯು, ಆ ಆತ್ಮಲೀಲಾವಿಲಾಸವೆ ಕೊನೆಯ
ಮೆಟ್ಟು.

ಇದು ಗುಟ್ಟು ತಿಳಿದಮೇಲಿನ ಮಾತಾಯಿತು. ಆದರೆ ಒಂದು
ಬಗೆಯಿಂದ ನೋಡಿದರೆ ನಾಟಕದ ಮನೋರಮತೆಯು ಕೇವಲ ಅದರ
ಗುಟ್ಟು ತಿಳಿಯುವದರಲ್ಲಿ ಅಷ್ಟೇ ಅಡಕವಾಗಿಲ್ಲ. ಅದನ್ನು ತಿಳಿದುಕೊಳ್ಳು
ವದಕ್ಕಾಗಿ ನೋಡುವವನು ಮಾಡುವ ಪ್ರಯತ್ನದಲ್ಲಿಯೂ ಒಂದು
ಬಗೆಯ ವಿಶೇಷ ಆನಂದವಿದೆ. 'ನನಗೆ ಮುಕ್ತಿ ಬೇಡ, ಅಖಂಡ ಭಕ್ತಿ
ಜೀವನವನ್ನೇ ದಯಪಾಲಿಸು' ಎಂದು ಮಹಾ ಭಕ್ತಶ್ರೇಷ್ಠರು ಪರ
ಮಾತ್ಮನನ್ನು ಬೇಡಿಕೊಳ್ಳುವದುಂಟು. ಅದರ ರಹಸ್ಯವಾದರೂ ಇದೇ
ಇರುವದು. ಜೀವ-ದೇವ ಸಂಬಂಧದ ರಹಸ್ಯವನ್ನು ಹುಡುಕುವಾಗ
ನಮ್ಮ ಜೀವನವೆಂಬುದೊಂದು ರಸಗೆಡದಂಥ ಅಖಂಡ ರಮ್ಯ ನಾಟಕ
ವಾಗಿ ಪರಿಣಮಿಸಬಲ್ಲದು. ಇಲ್ಲಿ ಹೇಳಿದ ನಾಲ್ಕು ಮಾತುಗಳು ಆ
ರಹಸ್ಯ ಹುಡುಕುವಾಗ ಆಡಿದ ಒಡನುಡಿಗಳು.

ಇವುಗಳನ್ನು ನಾನು ಹಿಂಡಲಗಿ (ಬೆಳಗಾಂವಿ) ಸೆರೆಮನೆಯಲ್ಲಿ
ಇರುವಾಗ (೧೯-೩-೩೨ ರಿಂದ ೭-೭-೩೪ ರ ವರೆಗೆ) ಬರೆದಿರುವೆನು
ಅರ್ಥಾತ್ ಇವು ಆ ಅವಧಿಯಲ್ಲಿ ಬೇರೆ ಬೇರೆ ಕಾಲಕ್ಕೆ ಬರೆಯಲ್ಪಟ್ಟಿವೆ.

ವುಗಳಿಗೆ 'ಪೂರ್ವಾರ್ಪಣ, ಸರ್ವಾರ್ಪಣ,' ಇಲ್ಲವೆ 'ಆತ್ಮಾರ್ಪಣ', ಂದು ಹೆಸರನ್ನಿಡಬೇಕೆಂದು ಮಾಡಿದ್ದೆನು. ಆದರೆ 'ಅಂತರಾತ್ಮನಿಗೆ' ಂಬ ಹೆಸರೇ ಮುಂದೆ ಯೋಗ್ಯವೆನಿಸಿದ್ದರಿಂದ ಅದನ್ನೆ ಆರಿಸಿರುವೆನು. ಈ ೬೦ ನುಡಿಗಳೆಲ್ಲ ಅರ್ಥತಃ ಬಿಡಿಬಿಡಿಯಾಗಿಯೆ ಇವೆ ಎಂದು ಹೇಳ ಹುದು. ಹಲವು ಮಾತ್ರ ಒಂದಕ್ಕೊಂದು ಕೊಂಡಿಯಂತೆ ಹಿಡಿದು ೊಂಡಿವೆ.

ಕೊನೆಗೆ ಶಬ್ದಾರ್ಥಗಳನ್ನು ಕೊಟ್ಟಿದ್ದೇನೆ ಅವು ಹಲವರಿಗಾ ರೂ ಉಪಯುಕ್ತವಾಗಬಹುದೆಂದು ನಂಬಿದ್ದೇನೆ.

ಈ ಎರಡನೆಯ ಆವೃತ್ತಿಯನ್ನು ಹೊರಡಿಸುವಾಗ ನನಗೆ ಹಲ ಲವು ಮಹತ್ವದ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ನನ್ನ ಪ್ರಿಯಮಿತ್ರರಿಗೆ ನ್ಯವಾದಗಳನ್ನರ್ಪಿಸದೆ ಇರಲಾರೆನು.

ಹುಬ್ಬಳ್ಳಿ ತಮ್ಮ

ಾ. ಶು. ೧ ಶಕೆ ೧೮೫೯ ರಂಗನಾಥ

ಪ್ರಕಾಶಕರ ನುಡಿ

ಆತ್ಮ —ಪರಮಾತ್ಮರ ನಡುವಿನ ಸಂಬಂಧವೇನು ಎಂಬುದು
ೀಗಾಣದ ಒಂದು ಜಿಜ್ಞಾಸೆ. ಅನೇಕ ಮತ ಪ್ರತಿಪಾದಕರು ಅದಕ್ಕೆ
ಮ್ಮ ವ್ಯಾಖ್ಯೆಗಳನ್ನು ನೀಡಿದ್ದಾರೆಂಬುದು ನಿಜ. ಆದರೆ
ಸನೆಯ ಮೂಲಕ ಅನುಭವಜನ್ಯವಾಗುವ ಸಂಗತಿಯನ್ನು ಬೇರೆ
ವ ಮಾರ್ಗದಿಂದಲೂ ತಿಳಿದುಕೊಳ್ಳಲು ಸಾಧ್ಯವಾಗದು. "ನಾನು
ರು?" ಈ ಪ್ರಶ್ನೆಗೆ ಉತ್ತರವನ್ನು ನಾನೇ ಹುಡುಕಬೇಕು. ಅದು
ಗಲೇ ನನ್ನ ಅಸ್ತಿತ್ವಕ್ಕೆ ಕಾರಣವಾದ ಪರಮ-ಆತ್ಮನೊಂದಿಗೆ ನನ್ನ
ಂಧವೇನು? ಅದು ಹೇಗೆ-ಏಕೆ ಹುಟ್ಟಿತು ಎಂಬದು ಗೋಚರವಾಗ
ದು. ಅದನ್ನು ಗೋಚರಿಸಿಕೊಳ್ಳುವ ಕುತೂಹಲ ಹುಟ್ಟಿದಾಗ ಎದ್ದ
ಸನೆಗಳ ಅಭಿವ್ಯಕ್ತಿಯೇ ಈ ಗ್ರಂಥದ ವಸ್ತು. ಅವು "ಅಂತ ರಂಗದ
ುಡಿಗಳು" ಎಂದು ಗ್ರಂಥಕರ್ತರೇ ಹೇಳಿದ್ದಾರೆ. ಈ ಒಳನುಡಿ
್ನ ಬರೆಯುವಾಗ ಅವರಿಗೆ ಆದ ಸಮಾಧಾನ ಹಾಗೂ ಆನಂದ
ಗಳನ್ನು ಓದುವವರಿಗೂ, ಮನನ ಮಾಡುವವರಿಗೂ ಲಭಿಸ
ಬುದು ಅವರ ಉದ್ದೇಶ. ಪ್ರಸ್ತುತ ಗ್ರಂಥ ಆರನೇ
ತ್ತಿಯನ್ನು ಕಾಣುತ್ತಿರುವದು ಅವರ ಉದ್ದೇಶ ಸಾಫಲ್ಯಕ್ಕೆ ಸಾಕ್ಷಿ.

ಶ್ರೀ ರಂಗನಾಥ ದಿವಾಕರರು ದೇಶದ ಸ್ವಾತಂತ್ರ್ಯಕ್ಕಾಗಿ ಜೀವ
ದ ಮಹಾ ಚೇತನ, ಸಾಹಿತಿಗಳೂ ತತ್ವಜ್ಞಾನಿಗಳೂ ಆಗಿರುವ
ಂದ ನಾಡಿಗೆ ಸಂದ ಕೊಡುಗೆಯೂ ಅಪಾರ. ಸ್ವಾತಂತ್ರ್ಯ
ರಾಟ ನಡೆದಾಗ ಬಂದಿಯಾಗಿ ಹಿಂಡಲಗಿ ಸೆರೆಮನೆಯಲ್ಲಿದ್ದಾಗ
ರು ಕಾಲ ಕಾಲಕ್ಕೆ ಬರೆದ ೬೦ ಒಳ ನುಡಿಗಳನ್ನು ಕೂಡಿಸಿ ಅವರ
ತ್ವದಲ್ಲಿದ್ದ ಅಧ್ಯಾತ್ಮ ಕಾರ್ಯಾಲಯವು ಪ್ರಕಟಿಸಿತು. ಲೋಕ

ಶಿಕ್ಷಣ ಟ್ರಸ್ಟ ಈಗ ಅದರ ಮರು ಮುದ್ರಣ ಕಾರ್ಯವನ್ನು ಕೈಕೊಂಡಿದೆ. ಅಧ್ಯಾತ್ಮ ಕಾರ್ಯಾಲಯ ಹಾಗೂ ಲೋಕ ಶಿಕ್ಷಣ ಮಾಲೆಗಳಲ್ಲಿ ಈ ಹಿಂದೆ ಪ್ರಕಟವಾದ ಎಲ್ಲ ಗ್ರಂಥಗಳ ಮರು ಮುದ್ರಣ ಮಾಡಬೇಕೆಂಬುದು ಟ್ರಸ್ಟಿನ ಅಪೇಕ್ಷೆ. ಅವೆಲ್ಲವೂ ಹಿಂದೆ ಹಲವಾರು ಆವೃತ್ತಿಗಳನ್ನು ಕಂಡದ್ದು ಅವುಗಳ ಜನಪ್ರಿಯತೆಗೆ ಸಾಕ್ಷಿ. ಲೋಕ ಶಿಕ್ಷಣದ ಪವಿತ್ರ ಧ್ಯೇಯ ಸಾಧನೆಗೆ ಈ ಕಾರ್ಯ ಪೂರಕ. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಪುಣ್ಯಪುರ ಜೀವನ ಚರಿತ್ರೆ ಹಾಗೂ ಹಿತೋಪದೇಶಗಳನ್ನು ಈಗಿನ ಜನಾಂಗಕ್ಕೆ ತಿಳಿ ಹೇಳುವ ಕರ್ತವ್ಯ ನಿರ್ವಹಣೆಗೆ ಅದು ಒಂದು ಸಾಧನವೂ ಹೌದು. ಪ್ರಿಯ ಓದುಗರು ಈ ಗ್ರಂಥಗಳ ಉಪಯೋಗ ಪಡೆದು ನಮ್ಮ ಉಪಕ್ರಮಕ್ಕೆ ಪ್ರೋತ್ಸಾಹ ನೀಡುವರೆಂದು ನಂಬಿದ್ದೇನೆ.

ಬೆಂಗಳೂರು
೧-೪-೧೯೮೮

ಬಿ. ಡಿ. ಜತ್ತಿ
ಚೇರಮನ್
ಲೋಕ ಶಿಕ್ಷಣ ಟ್ರಸ್ಟ್.

೧

ಯುಗಯುಗಾಂತರದಿಂದ ನಿನ್ನನ್ನು ಅರಸುತಲಿರುವೆ
ಹೇ ಎನ್ನ ಪ್ರೇಮಪೂಜೆಯ ಪುತ್ಥಳಿಯೆ.
ನಾನಿನ್ನು ತಡಯಲಾರೆ. ನೀನು ಎನ್ನನಗಲಿ
ದಂದಿನಿಂದ ಕಂಡು ಕಾಣದೆ, ಅರಿತು ಅರಿಯದೆ,
ದು ತಿಳಿಯದೆ ನಿನ್ನನಲ್ಲದೆ ಇನ್ನಾವುದನು ಬಯಸಿಲ್ಲ,
ಡಿಲ್ಲ, ಹುಡುಕಿಲ್ಲ ಎನ್ನ ಹೃದಯಸ್ವಾಮಿ. ಅತ್ತಿತ್ತ
ರಸಿದನು ಬೆಂಬಳಿಸಿ ಹರಿಯುವಂತೆ ತೋರುವುದೆನ್ನ ಮನವು,
ಲ್ಲಿ ನೀನಿರುವೆಯೆಂಬ ಹುಸಿಯಾಸೆ ಅದಕೆ. ಅದೆಲ್ಲ ನಿನಗಾಗಿ
ನ್ನ ದೊರೆಯೇ; ನಿನ್ನನು ನೋಡಿ, ಕೂಡಿ, ನಿನ್ನೊಡನೆ ನಲಿ
ದಾಡಬೇಕೆಂದಲೆ. ನಿನ್ನನು ಪಡೆದಾಕ್ಷಣವೆ ಎನ್ನ ಹಸಿವು
ಗುವದು, ಎನ್ನ ಆತುರ ಅಳಿಯುವದು; ಸಾಗರವ ಸೇರಿದ
ತ್ತಿನಂತೆ ಶಾಂತವಾಗುವುದೆನ್ನ ಹೃದಯ. ಅಂಧಕ ಬೆಳಕ
ಡುಕಿದಂತಾಗಿದೆ ಇದು ವರೆಗೆ ಎನ್ನ ಶೋಧ. ಇನ್ನಾದರೂ
ಣಿಸಯ್ಯ. ಎನ್ನ ತವಕವ ತಣಿಸಿ, ಕಳವಳವ ಕಳೆದು ಕೃಪೆ
ಡು, ಜೀಯಾ. ಕಳೆದುಹೋದ ತನ್ನ ನಲ್ಲೆಯನು ಕಂಡೊ
ನಲ್ಲನು ಬಿಗಿಬಿಗಿದಪ್ಪುವಂತೆ ಎನ್ನನೊಮ್ಮೆ ಮನದಣಿ
ದ್ದಾಡಯ್ಯಾ, ಅಂತರಾತ್ಮಾ.

ಬಂದೋ ಅಗಲಿದ ಒಡೆಯ ಇಂದು ಬಂದು ಎನ್ನನು
ಕಾಣುವನೆಂಬ ಸುಖಸ್ವಪ್ನವಾಗಿರುವುದೆನಗೆ.
ಹಾದಿ ಕಾದು ಕಾದು ಕಾತರಗೊಂಡಿದ್ದೆನು.
ಒಮ್ಮೆ ಕೃಪೆಯಾಯಿತೆನ್ನಬೇಕು. ಅವರಿನ್ನಾವ
ಪರಿ ಸ್ವಾಗತಿಸಲಿ ಆ ಎನ್ನ ಹೃದಯ ಸ್ವಾಮಿಯನು? ಮನ
ದಂಗಳವನುಡುಗಿ, ಶಾಂತಿ ಸೇಚನೆ ಮಾಡಿ, ಸುವಿಚಾರದ
ರಂಗವಲ್ಲಿಯ ಹಾಕಿ, ನಿಲ್ಲುವೆ ಬಾಗಿಲಲಿ ನಾನು. ಬಾ, ಬಾ,
ದೊರೆಯೆ, ಈ ನಿರ್ಮಲ ಭಾವಪೀಠದಲಿ ಕುಳಿತು ಎನ್ನಂತ
ರಂಗವನು ಆಳು. ನಿನ್ನ ಕಿರಿಯಾಳಾಗುವುದೆ ಹಿರಿದಾದ
ಅರಸುತನವೆನಗೆ, ಅಂತರಾತ್ಮ.

ಸ್ವಾಮೀ, ಎನ್ನಂತರಂಗದ ಕತ್ತಲೆ ಹರಿದು ಮಂಗಲ ಸುಪ್ರಭಾತವಾಗುವುದೊ ಈ ಹೊತ್ತು? ಆ ಭಾಗ್ಯವಳವಡುವುದೊ ಎನ್ನ ಈ ಜೀವನದಲ್ಲಿ? ದೇವಾ ಯಾಕೆ, ಉತ್ತರವಿಲ್ಲ? ನೀನು ಹೊರಿಸಿದ ಈ ತನುಮನಧನಗಳ ಹೊರೆ ಹೊತ್ತು, ಅವೆಲ್ಲ ಎನ್ನದೆಂದು ಹೊಡೆದಾಡಿ ಬೇಸತ್ತೆನಲ್ಲಾ! ನಿನ್ನ ಸೊಮ್ಮ ನಿನಗೊಪ್ಪಿಸಿ ಕಡೆ ಸಾಯುವ ಕ್ಷಣವ ತಾ ಬೇಗ ಪ್ರಭುವೇ. ಸಾಕು, ಸಾಕು, ನನ್ನು ಪರೀಕ್ಷಿಸಬೇಡ. ನಂಬಿದವನು ನಷ್ಟವಾಗುವತನಕ ಕಡೆಯಬೇಡ. ನನ್ನ ನಿನ್ನದೆಂಬುದೆಲ್ಲವ, ಇಕೊ, ಈ ಅಂಜಲಿಯಲಿ ಹಿಡಿದುಕೊಂಡು ನಿಂತಿರುವೆ. ಇದನು ಸ್ವೀಕರಿಸು, ನನ್ನನೂ ಸ್ವೀಕರಿಸು. ಈ ಹೊತ್ತು, ಇದು ಸರ್ವಾರ್ಪಣ. ಪೂರ್ಣಾರ್ಪಣ ಹೇ ಅಂತರಾತ್ಮನ್, ಇನ್ನು ನಾನು ಮಾಡುವುದೆಲ್ಲ ನಿನ್ನ ಯಂತ್ರವೆಂದು. ಭೋಗಿಸುವುದೆಲ್ಲ ನಿನ್ನ ಪ್ರಸಾದವೆಂದು, ಸುಖಿಸುವುದೆಲ್ಲ ನಿನ್ನ ಕರುಣೆಯೆಂದು, ತನುಮನಧನಗಳ ಮಮತೆಯ ಕಳೆದು, ಆತ್ಮಗುಣವನೆ ಪಡೆದು, ಇನ್ನು ನಲಿಯುವೆನಯ್ಯ ನಿನ್ನ ನಿಜ ಕರ್ಮಲೀಲೆಯಲಿ, ನಿನ್ನ ಕೃಪೆ ದೇವಾ, ಅಂತರಾತ್ಮಾ.

ಗಿಡ ಬಳ್ಳಿಗಿಂತ ಬುದ್ಧಿಗೇಡಿಯಾದೆನಲ್ಲಾ ನಾನು ಅವುಗಳಿಗಿಂತ ಕಡೆಯಾಗಿ ಕೆಟ್ಟೆನಲ್ಲಾ ಪ್ರಭುವೇ ಬಳ್ಳಿ ಮೊಳೆತು, ಚಿಗಿತು, ಬೆಳೆದು ಮರವನೇರು ವುದು: ಹೂತು ಮಣ್ಣಿನ ಗಂಧ ಗುಣವ ಪರಿ ಪಾಕಗೊಳಿಸಿ ದೆಸೆದೆಸೆಗೆ ಪರಿಮಳವ ಬೀರುವುದು. ಬಳ್ಳಿ ತಾ ಮುಡಿಯುವುದೆ ಆ ಹೂವ? ಆಸರ ಕೊಟ್ಟ ಮರ ತಾ ಕೊಳ್ಳು ವುದೆ ಆ ಪರಿಮಳವ ? ಇಲ್ಲ, ಇಲ್ಲ. ಗಂಧ ಮುಖದಿಂದ ಔತ ಣವ ಕೊಟ್ಟು ತುಂಬಿಗಳ ಕರೆಕರೆದು ಭೂಸುಧೆಯನುಣ್ಣಿಸುವ ಆ ಮೂಕ ಬಳ್ಳಿ ಎತ್ತ ? ಉಪವಾಸ ವನವಾಸಗಳಿಂದ ತೊಳ ಲುತ್ತ ಬಳಲುತ್ತ ಮರಗುವ ಮಾನವ ಬಾಂಧವರನು ಧ್ಯಾನಿ ಸದೆ, ಮನ್ನಿಸದೆ, ಅಟ್ಟುಂಬ ಉಣ್ಣಗುಳಿ ನಾನೆತ್ತ? ಅಂತ ರಾತ್ಮನಿಗೆ ಸರಿದೋರುವುದೆ ಈ ಸ್ವಾರ್ಥಾಚಾರ ? ಬನದ ಬಳ್ಳಿಗಳಲಿ ಒಂದನು ಮಾಡಿ ಬದುಕಿಸಯ್ಯಾ ಎನ್ನನು ಸ್ವಾಮೀ

ಮನ ವಿಮಲವಾಗದನಕ ಆತ್ಮಜ್ಯೋತಿ ಬೆಳಗದೆನ್ನು ವರು ಜಾಣರು. ಕರುಣಿಸಯ್ಯಾ, ಎನ್ನ ಮನವ ನಿರ್ಮಲಗೊಳಿಸಿ. ಮನದ ಮಲಿನವ ತೊಳೆಯಲಾಗದೆ ಬಳಲುತಿರುವೆನು ಹಗಲಿರುಳು. ನಭವ ೀಲವ ತೊಡೆಯಬಹುದು. ಕತ್ತಲೆಯ ಕಪ್ಪನಳುಕಿಸಬಹುದು, ಮನದ ಕೊಳೆಯ ಕಳೆಯಲಾಗದು, ದೇವಾ. ಇನ್ನೇನು ಮಾಡಲಿ ? ತೊಳೆತೊಳೆದಂತೆ ಕೊಳೆ ಹೊರಡುವುದಲ್ಲದೆ ೆಳಗದು ನೋಡಾ, ಈ ಮನ. ಎನ್ನೊಂದು ಹಾಳು ಮನವ ೆಳಗದಷ್ಟು ನಿನ್ನ ನಿಸರ್ಗ ನಿರ್ಬಲವಾಯಿತೆ ಪ್ರಭುವೇ ? ೆಳಗಿನ ಅರುಣದಲಿ ಮೀಯಿಸಿ, ಶುಭ್ರ ಸೂರ್ಯ ಕಿರಣಗಳ ೊಡಿಸಯ್ಯಾ ಒಮ್ಮೆ ಎನ್ನ ಮನಕ್ಕೆ. ಕೋಲ್ಮಿಂಚಿನ ಪ್ರಭೆ ಿಂದ ಬೆಳಗಯ್ಯಾ ಒಮ್ಮೆ ಎನ್ನ ಮನವ. ಗಿರಿ ನಿರ್ಝರದ ಿರ್ಮಲ ನೀರಿನಿಂದತೊಳೆದು ಒಮ್ಮೆ ಸ್ಫಟಿಕ ಶಿಲೆಯಂತೆ ಮಾಡಯ್ಯಾ ಎನ್ನ ಮನವ. ಸತ್ಸಂಗದಿಂದ ಶುದ್ಧೀಕರಿಸಿ ನ್ನನು ಬಳಿಗೆ ಕರೆಯಿಸಯ್ಯಾ. ಅಂತರಾತ್ಮಾ.

ದೇವಾ, ನಿನ್ನನರಿಯುವುದು ಹೇಗೆ? ಏತರಿಂದ ? ನಿನ್ನ ಕೃಪೆಯಿಲ್ಲದನಕ ಅಸಾಧ್ಯವಯ್ಯಾ. ನೀನು ಕೊಟ್ಟ ಕಾಯ ಜಡ, ಪ್ರಾಣ ಸ್ವಾರ್ಥಪೂರ್ಣ, ಮನ ಚಂಚಲ. ಬುದ್ಧಿ ದ್ವೈತವಸಲ್ಲದೆ ಕಾಣದು: ಇನ್ನುಳಿದುದು ಭಾವ. ಎನ್ನ ಭಾವಕ್ಕೆ 'ಅಹಂ' ಭೂತ ಬಡ ಕೊಂಡಿದೆ! ಭಾವದಂತೆ ದೇವ ಎನ್ನುವರು. ಭಾವದಿಂದಲೆ ದೇವ ಎನ್ನುವುದು ನಿಜ. ಭಾವವಿಲ್ಲದೆ ನೀನಿಲ್ಲ. ನಾನಿಲ್ಲ. ಯಾರೂ ಇಲ್ಲ. ಒಂದೇ ಒಂದು ಅಖಂಡ ಪ್ರಚಂಡ ನಿಯಮ ನಿಗಡಿತ ನಿಸರ್ಗಯಂತ್ರಚಲಿತ ಅನಂತ ಕ್ರಿಯಾ ಮಾಲೆಯ ಹೊರತು ಇನ್ನೇನೂ ಕಾಣಬಾರದು ಭಾವರಹಿತ ರಾಜ್ಯದಲಿ. ಆ ಎನ್ನ ಭಾವಕ್ಕೆ ಬಡಕೊಂಡ 'ಅಹಂ' ಪಿಶಾಚಿಯ ಬಿಡಿ ಸಯ್ಯಾ, ವಿಷಯದಿಂದ ಕಿತ್ತಿ ತೆಗೆದು ನಿನ್ನಲಿ ಇರಿಸಯ್ಯಾ ಎನ್ನ ಮನವನು. ಬರಿಯ ಹೊರಗೆ ನೋಡದೆ ಒಳಗೆ ನೋಡಲು, ಒಳನೋಟದಿಂದ ಹೊರಗೆ ನೋಡಲು ಕಲಿಸಯ್ಯಾ ಎನಗೆ, ಅಂತರಾತ್ಮಾ.

ಅಪ್ಪಾ, ಸ್ವಾಮೀ, ಎನ್ನ ಮೇಲೆ ಇಷ್ಟೇಕೆ ರೋಷ? ಕಂದನ ಹುಟ್ಟಿಸಿ ಈ ಪರಿ ಕಾಡುವರೇ? ನಾನೊಂದು ಅಣುಜೀವ ಅಭಿಪ್ರಾಣಿ. ನಾನು ಮಾಡಿದ ತಪ್ಪಾದರೂ ಏನು? ಗುಬ್ಬಿಯ ಮೇಲೆ ಈ ಬ್ರಹ್ಮಾಸ್ತ್ರವೇಕೆ? ಅಯ್ಯೋ, ಏನು ಈ ಅನರ್ಥ ಪರಂಪರೆ? ಉಕ್ಕುಗಡಲಿನ ಪೆರ್ದೊರೆಗಳ ಪರಿ ಎನ್ನ ಮೇಲೆ ಅಟ್ಟಟ್ಟಿ ಂದು ದುಃಖರಾಶಿ ಬಿದ್ದರೆ ತಡೆಯಬಲ್ಲುದೆ ಈ ಜೀವ? ದನು ನೋಡಿ ನೀರಾಗುವುದೆನ್ನ ಎದೆ. ಇನ್ನಾದರೂ ಕರು ಸಿ ಕಾಪಾಡು ಎನ್ನ ತಂದೆ. ಅಬ್ಬಬ್ಬ ಏನಿದು! ಈ ಹೊತ್ತೇನು ರುಜೆಯಡಸಿತು. ನಾಳೆ ಧನವಡಗಿತು, ಮುಂದೆ ರೆಮನೆವಾಸವಾಯ್ತು, ಬಳಿಕೇನು ಮೋಹದ ಮಡದಿ ಮಕ್ಕಳ ಮರಣ. ಹೀಗೆ ಎನ್ನ ನನ್ನದೆಂಬುದೆಲ್ಲ ನೀಗಿ ಹೋಗಿ ಬರಿಯ ರಟೆಯ ದೊರೆತನವಾಯಿತಲ್ಲಾ ಎನಗೆ! ಅಯ್ಯೋ. ಇದ ಲ್ಲ ಹೇಗೆ ಸಹಿಸಲಿ, ಅಂತರಾತ್ಮಾ? ಕೊನೆಗೆ ನಿನ್ನೊಲುಮೆ ಯನಾದರೂ ನೀಡಬಾರದೆ, ದೇವಾ. ಆ ಸಮಾಧಾನವಾದರು ಬೇಡವೆ?

ದುಃಖ ಕಷ್ಟಗಳು ಬೇಡೆಂದೊಡೆ ಎನಗೆ ಧೀ ಹಾಕ
ದೊರೆಯೇ. ದುಃಖವೆ ಪಾಪನ ದುಃಖ
ಪಾವಕ, ದುಃಖವೆ 'ಅಹಂ' ನಾಶಕ. ದುಃಖ
ಎನ್ನ ಮಾಯೆಗೆ ಮದ್ದು. ಅದೇ ನಿನ್ನ ದಾ
ದೋರುವ ದೀಪ. ಇಕ್ಕಿನ್ನನು ಶೋಧಿಸಲು ದುಃಖದ ಬೆಂ
ಯಲಿ ಬಂಗಾರದಂತೆ, ಎಸೆ ಎನ್ನನು ಎಡೆಬಿಡದೆ ಸಂಕಟ ಸಾಯ
ಕಗಳಿಂದ. ಆದರೆ ಒಂದು ಚಿಕ್ಕ ಹರಕೆ ನಿನ್ನ ಪಾದದಲ್ಲಿ
ದೊರೆಯೇ, ನಿನ್ನ ಕರುಣದ ಕವಚವ ತೊಡಿಸು ಎನ್ನ ಹರಣಕ್ಕೆ
ಪ್ರಭುವೇ. ಆಹಾ, ಅದರಿಂದ ಸಾವಿರ ಗಜಬಲ ಎನಗೆ
ಬಳಿಕೇನು, ಬಳಿಕೇನು? ದುಃಖವಿಷವನುಂಡು ಅಮೃತನಾ
ಬಲ್ಲೆ ನಾನು. ಚಿಂತೆಯ ಉರಿಯ ನುಂಗಿ ತಣಿಯಬಲ್ಲೆ
ನಾನು. ಆ ನಿನ್ನ ಕಾರುಣ್ಯದ ವೀರ್ಯವನೀಯು ಎನಗೆ
ಅಂತರಾತ್ಮಾ. ನೀ ಹೊರಿಸಿದ ಭಾರವ ನೀನಲ್ಲದಿನ್ನಾರಿಳುಹ
ಬಲ್ಲರು, ದೇವಾ?

ಶ್ರೀ ಹಾ, ಅದೇನು, ಆ ದಿನ ಎನ್ನನು ಪರಿಶುದ್ಧ ಮಾಡಿದುದು? ಅದೆಂತಹ ಅಂತರ್ಮಥನವದು? ಆ ಅಗ್ನಿ, ಸಂತಾಪವೆಂಬ ಅಗ್ನಿ; ಒಳ ಸಂಕಟಗಳ ಅಗ್ನಿ; ಆಹಾ ಅದರಿಂದಾದ ಅಂತಃಶುದ್ಧಿ; ಆಹಾ; ಅದೇ ದಿವ್ಯಾಗ್ನಿಯಲ್ಲವೇ? ಪಾವಕವೆಂಬ ಹೆಸರು ಅನ್ವರ್ಥಕವಾಯಿತದಕೆ; ಪಾತಕವನಳಿಸಿ, ಕಾಮುಪುರುಷನ ಸುಟ್ಟು, ಅಹಂನಾದವ ಕೆಡಿಸಿ, ಎನಗೆ ನಿನ್ನ ಕಳೆಯನೇರಿಸಿ ಪಾವನ ಮಾಡಿದ ಅಗ್ನಿ ಗುರುವನ್ನು ನಾನು ಮರೆಯುವೆನೆ, ಅಂತರಾತ್ಮಾ? ಆ ಅಗ್ನಿ ಪರೀಕ್ಷೆಯ ಪರಮೋತ್ಸವವ ಬಣ್ಣಿಸಲಳವೆ? ಆ ಉರಿನಾಲಗೆ ನನ್ನ ಬಹಿರಂಗವ ನೆಕ್ಕಿ ತೊಳೆಯಿತು. ಅದರ ಝಳದಿಂದ ಎನ್ನ ಮನ ಹಸನಾಯಿತು, ಆ ತೇಜದಿಂದ ಎನ್ನಂತರಂಗ ಬೆಳಗಿತು. ಆ ಪಾವನತೆಯೆ ಅಲ್ಲವೆ ಎನಗೆ ಪ್ರಸನ್ನತೆಯ ಕೊಟ್ಟುದು? ಆ ಚೆಂಕಿಯಲ್ಲವೆ ಎನ್ನನಪರಂಜಿಯ ಮಾಡಿದುದು? ಆ ಸಂಸ್ಕಾರವಲ್ಲವೆ ಎನ್ನನು ನಿನ್ನ ಸೇವಕ ವೃಂದದಲಿ ಸೇರಿಸಿದುದು? ಅಯ್ಯಾ, ಅಯ್ಯಾ, ಎನ್ನ ಆ ರೀತಿ ನಿತ್ಯ ಪಾವನ ಮಾಡಯ್ಯಾ ಪಾವುಕಪುರುಷಾ, ಆ ಪರಿ ಸುಟ್ಟು ಚಿಣ್ಣಗಾಗುವ, ಸತ್ತು ಬದುಕುವ ಬೀದಿಯ ತೋರಯ್ಯಾ. ಅಂತರಾತ್ಮನೇ.

ನಲುಮೆಯ ನಿಧಿಯನ್ನು. ಜೀವನಸರ್ವಸ್ವವಾದ
ಧನಕನಕಗಳನ್ನು ಕಳಕೊಂಡ ಜಿಪುಣನಂತಾದೆ
ನಾನು. ತುಂಬಿದಂತಿದ್ದ ಎನ್ನ ಹೃದಯವು ಈಗ
ಬರಿದಾಯ್ತು. ತೆರವಾಗಿ ರಣಗುಟ್ಟುವ ಈ
ಎನ್ನ ಹೃದಯಮಂದಿರವನ್ನು ಇನ್ನಾತರಿಂದ ತುಂಬಲಿ? ಆದರ
ಎಂತಹ ಮೂಢ ನಾನು? ಈ ಕ್ಷುದ್ರ ವಸ್ತುಗಳನೇನೆಂದು ಕಾದಿ
ದ್ದೆನೊ? ಬಂಗಾರವೆಂದು ಬೊಕ್ಕಸದಲ್ಲಿ ಕಸಕಡ್ಡಿ ತುಂಬಿ
ಅದನ್ನು ಅವಚಿಕೊಂಡು, ಹಗಲಿರುಳು ಅದನ್ನೆ ಬಗೆಬಗೆದು
ಮರುಳಾಗಿದ್ದೆನಲ್ಲಾ! ದೇವಾ, ದೇವಾ, ಈಗ ಎನ್ನ ಮರುಳು
ಮಾಯವಾಯ್ತು. ಅರಿವು ಅಳವಟ್ಟು ಬೆಳಗು ತಲೆದೋರಿತು.
ಬಾ. ಎನ್ನ ತಂದೆ. ನೀನೇ ಈ ತೆರಪು ತುಂಬಿ ತೃಪ್ತಿಬಡಿಸು.
ನೀನಿಲ್ಲದೆ ಏನೂ ಇಲ್ಲ. ನೀನಿದ್ದರೆ ಎಲ್ಲವೂ ಇದೆ. ಅಲಂಕರಿಸು.
ಅಂತರಾತ್ಮಾ, ಈ ಶೂನ್ಯ ಸಿಂಹಾಸನವ ನೀನೆ ಅಲಂಕರಿಸಿ
ಎನ್ನಂತರದ ಐಶ್ವರ್ಯವ ಬೆಳಿಸು. ಎನ್ನಂತರದ ಐಶ್ವರ್ಯವ
ಬೆಳೆಸು.

ಎಲ್ಲಿಹುದು, ಯಾತರಲ್ಲಿ ಎನ್ನ ಜೀವನಪೂರ್ತಿ
ಪ್ರಭುವೇ? ಮುಂದೋರದೆ ತಿರ್ರನೆ ತಿರುಗಿಸುವೆ
ಯಲ್ಲಾ ಈ ಚಕ್ರದಲ್ಲಿ; ದಯೆಬಾರದೆ ಈ ಎನ್ನ
ದೀನದೆಸೆ ನೋಡಿ? ಸಾಕಿನ್ನು, ಬೇಸತ್ತೆ ಮೈ
ೋತೆ. ಮುಂಗಾಣದೆ ನಿರರ್ಥಕ ಅಡಿಯಿಡಲಾರೆ. ತೋರು,
ೋರು ಬೇಗ ತೋರು, ಬೆರಳ ತೋರು, ಬೆಳಗ ತೋರು,
ರುಡನ ಕೈ ಹಿಡಿದು ಹಾದಿಗೆ ಹಚ್ಚು, ದೇವಾ. ಎನ್ನಂತ
ಂಗದ ಆರ್ತಾಲಾಪವ ಕೇಳು ಎಲ್ಲಿಹುದು, ಯಾತರಲ್ಲಿ ಎನ್ನ
ೀವನಪರಿಪೂರ್ತಿ, ಅಂತರಾತ್ಮಾ? ಒಮ್ಮೆ ಉಸುರಿ, ಕರಿತೆರೆ
ರಿಸಿ. ಚಿನ್ಮಯ ಪ್ರಕಾಶವ ಬೀರು, ಹೃದಯಸ್ವಾಮೀ. ಎನ್ನ
ದ್ಧರಿಸು. ಕಾಡಗೀಡಾದವನ ಬೀಡಿಗೆಡೆ ಮಾಡಿ ನವಜೀವನವ
ಡು. ಸ್ವಾಮೀ, ಸ್ವಾಮೀ, ಎಷ್ಟೆಂದು ಕರೆಯಲಿ? ಏನೆಂದು
ರೆಯಲಿ? ಯಾವ ರೀತಿ ಮೊರೆ ಇಡಲಿ? ನಿನ್ನ ಬಿಟ್ಟು
ನ್ನಾರನು ಸೇರಲಿ. ಇನ್ನಾರು ಗತಿ ಎನಗೆ, ಅಂತರ್ಯಾ
ಯೋ?

ಆರಿಗರ್ಪಿಸಲಿದನು. ಆರಿಗೇರಿಸಲಿ ಈ ಜೀವ
ಪುಷ್ಪವ? ತೋರಾ. ತೋರಾ. ಅಂತರಾತ
ಎನಗೆ ಎನ್ನ ಇಷ್ಟದೇವತೆಯು. ಈ ಒಡ
ಒಗೆದು ಉಣಿಸಿ ಉಡಿಸಿ ವರ್ಧಿಸಿದರು ತಂ
ತಾಯ್ಗಳು. ವಿವಿಧ ಸಂಸ್ಕಾರಗಳಿಂದ ಸುಸಂಸ್ಕೃತ. ಪಾಯಿತಿ
ಮನ. ವಿವೇಕವಿಕಾಸವಾಗಿ ಬೆಳಗಿತೀ ಬುದ್ಧಿ. ಸ್ಥಿರ ಮಧು
ಪಾಯಿತೀಭಾವ. ಅಯ್ಯಾ, ಅಯ್ಯಾ. ಈ ಬೆಳೆದ ಬಳ್ಳಿಯ
ಹಿರಿಯ ಹೂವನೆರಚುವ ತಾವದೋರಿ ಧನ್ಯ ಮಾಡೆನ್ನನು ತಂದ
ತೊರೆ ಬಿಟ್ಟ ಆವಿನಂತೆ. ಹಸಿದ ಕೂಸಿನಂತೆ, ವಿಯೋಗವಿರಹಿ
ಯಂತೆ ಸ್ಫೂರ್ತಕವಿಯಂತೆ ತವಕಗೊಳ್ಳುತಿರುವುದೆನ್ನ ಹೃದಯ
ಎಂದಿನಿಂದ ಈ ಹೂವನು ಹಿಡಿದುಕೊಂಡು ನಿಂತಿರುವೆ. ಇ
ದೇವತೆಯು ಕಾಣದೆ ಕೈ ಸೋತು ಕೆಳಗೆ ಚೆಲ್ಲಿಬಿಡಲೊ
ಹೂವನು ಅಥವಾ ನಿರಾಶೆಯಿಂದ ಬಯಲಲ್ಲಿ ಬೀಸಾಡಿಬಿಡಲೆ
ಎಂಬಂತಾಗಿದೆ. ಏನು ಮಾಡಲಿ, ಹೇಳೊಮ್ಮೆ ಪ್ರಭುವೆ
ಇಂದ್ರಿಯ ಸುಖಕ್ಕಿಡಾಡಲೇ ಈ ಎನ್ನ ಶಕ್ತಿಗಳನು? ಅದು ಸ
ದೆನಗೆ. ಆತ್ಮಸುಖದ ಸುಳಿವುಗಂಡವನಾಗಿ. ಮಡದಿ ಮಕ್ಕ
ಬಂಧು ಬಳಗದ ಸುಖವ ಸಾಧಿಸಲೆ ಈ ಸೊತ್ತಿನಿಂದ? ರುಚಿ
ದೆನಗೆ. ಅದು ಸಂಕುಚಿತ ದೃಷ್ಟಿ ಎಂಬುದಾಗಿ. ಮನೆ ಮಡಿ
ಧನಕನಕ ಬೀಸಾಡಿ ಬೂದಿ ಹೂಸಿ ಏಕಾಕಿಯಾಗಿ ಸನ್ಯಾ
ಯಂತೆ ಏಷ್ಟೊಬ್ಬನ ಆತ್ಮ ಸುಖವನರಸಲೆ? ಛೀ, ಅದು ಸ

ಶೋಚದೆನಗೆ, ಅದೊಂದು ಮಹಾಸ್ವಾರ್ಥವೆನಿಸಿತ್ತಾಗಿ. ಹಾಗಾ
ದರೇನು, ದೇವಾ, ಉಚಿತ ಧ್ಯೇಯವಾವುದಿಲ್ಲವೆ ಎನಗಾಗಿ?
ಯೋಗ್ಯ ಇಷ್ಟದೇವತೆ ಯಾವುದಿಲ್ಲವೆ ಎನಗಾಗಿ? ಈ ಎನ್ನ
ಜೀವನದ ಜೇನ ಹಿಂಡಿ ಸವಿಯುವ ಬೇಟೆಗಾರ ಹುಟ್ಟಿಲ್ಲವೆ,
ಅಯ್ಯಾ? ತೋರು, ತೋರು, ನೀನೇ ದಾರಿ ತೋರು, ಬೇಗ
ತೋರು. ಈ ಹೂ ಬಾಡಿ ಬತ್ತಿಹೋಗುವ ಮುನ್ನ ಈ ಹರ
ಇಳಿದು ಮುಪ್ಪು ಕೈ ದೋರುವ ಮುನ್ನ, ತೋರೆನ್ನ ತಂದೆ,
ಕೈಯೆತ್ತಿ ಬೇಡಿಕೊಂಬೆ: ಇದನರ್ಪಿಸುವ ಠಾವ ತೋರು
ಅಂತರಾತ್ಮಾ.

ಮೋರೆವಟ್ಟಿತೆನ್ನ ಮರುಳ್ತನ ಈಗ! ನಿನ್ನದೆಲ್ಲ ಎನ್ನದೆಂದು ವ್ಯರ್ಥ ಹೊತ್ತು, ಹೆಣಗಿ, ಹೋರಾಡಿ, ದಣಿಯುವ ಈ ಮೂಢನ ನೋಡಿ ನಗುತಿರ್ಪೆಯಲ್ಲಾ, ದೇವಾ. ಎನ್ನದಲ್ಲದನು ಯಾರಿಗರ್ಪಿಸಲಿ. ಯಾವ ದೇವತೆಗೀಯಲಿ, ಎನ್ನ ಧ್ಯೇಯವೇನು. ಎಂದು ನಿನ್ನ ಕೇಳಿ ಹಾಸ್ಯಮಾಡಿಕೊಂಡೆನಲ್ಲಾ ನಾನು! ಯಾತರಿಂದ ಮುಚ್ಚಲಿನ್ನು ಈಗೆನ್ನ ಮುತ್ತಿದ ನಾಚಿಕೆಯ. ನಿನ್ನ ಕರುಣದಿಂದಲ್ಲದೆ? ನಿನ್ನ ಸೊಮ್ಮ ನಿನಗೊಪ್ಪಿಸಿ ಸುಖಿಸಲಾರೆನೆ ನಾನು? ನೀನು ಕೊಟ್ಟ ತನು, ನೀನಿತ್ತ ಮನ, ನೀನಿರಿಸಿದ ಬುದ್ಧಿ ನಿನ್ನ ಜನದ ಸೇವೆಯಲಿ ಸವೆಯಿಸಿ ಸಮಾಧಾನಿಯಾಗಬಾರದೆ ನಾನು? ಜನತಾಜನಾರ್ದನ, ಪ್ರಜಾಪರಮೇಶ್ವರ, ನರನಾರಾಯಣ ಇದೇ ಎನ್ನ ದೇವತೆಯಲ್ಲವೆ? ಈ ದೇವತೆಯ ಸೇವೆಯೆ ಎನ್ನ ಜೀವನ ಸರ್ವಸ್ವವಲ್ಲವೆ, ಸರ್ವಪ್ರಭುವೆ? ನೀ ಎನಗೆ ಕೊಟ್ಟುದೆಲ್ಲ ನಚ್ಚಿನ ನಿಧಿ. ವಿಶ್ವಾಸದ ಗಂಟು. ಅವನದಕೆ ನಿನ್ನ ಕಾರ್ಯಕೆ ಬಳಸಿ ನಾನು ನಿರ್ಲೇಪನಿರಬಲ್ಲಡೆ ನಾ ಮುಕ್ತ. ನಿನ್ನದೆಲ್ಲ ನನ್ನದೆಂದು ಭಂಡನಂತೆ ಬಡಿದಾಡಿದಡೆ ನಾ ಬದ್ಧ. ಮುಕ್ತ ಜೀವನದ ಮಾರ್ಗವ ತೋರಿ ನಡೆಯಿಸು ಎನ್ನನು ಅಂತರಾತ್ಮಾ.


ಹೊನ್ನು, ಹೆಣ್ಣು, ಮಣ್ಣು. ಹೇಯವೆಂಬರು ಜಾಗಿಗಳು. ಹೇಯವೆಂಬುದುಂಟೆ ಅಯ್ಯಾ. ನೀನು ಹುಟ್ಟಿಸಿದುದರಲ್ಲಿ? ತಿಪ್ಪೆಯ ಕೊಳೆಕಸ ಕೂಡ ಹೊಲಕೆ ಹುಲುಸಲ್ಲವೆ? ಹೊನ್ನೆಂಬುದು ಸಕಲಾರ್ಥಸಾಧಕವಲ್ಲವೆ. ಹೆಣ್ಣೆಂಬುದು ಅಖಿಲ ಮಾನವ ಕುಲದ ಮಾತೆಯಲ್ಲವೆ, ಮಣ್ಣೆಂಬುದು ಸಕಲ ಜೀವಕೋಟಿಗಾಧಾರವಲ್ಲವೆ. ಪ್ರಭುವೆ? ಇವುಗಳನುಳಿದು ಬಾಳುವವರು ಕಾಣರೆನಗೆ, ನೋಡುವ ಭಾವದಲ್ಲಿ, ಬಳಸುವ ಪರಿಯಲ್ಲಿ ಹೇಯ ಶ್ರೇಯವೆಂಬುದಲ್ಲದೆ ಆ ಪದಾರ್ಥದಲ್ಲಿಲ್ಲ ಕಾಣಾ. ಜಾಗೀ. ನಾನು ನನ್ನದೆಂಬುದು ಹೇಯ, ನೀನು ನಿನ್ನದೆಂಬುದು ಶ್ರೇಯವಲ್ಲವೆ. ದೇವಾ ? 'ಅಹಂ ಮಮ' ಎಂಬುದು ಹೇಯ. 'ತವ ದಾಸೋऽಹಂ' ಎಂಬುದು ಶ್ರೇಯವಲ್ಲವೆ. ಪ್ರಭುವೇ? ನಾನೆಂದು ಕಂಡದ್ದು ಕೇಳಿದ್ದು, ಮೂಸಿದ್ದು. ಮುಟ್ಟಿದ್ದು ವಿಷ: ನೀನೆಂದು ನೋಡಿದ್ದು ಮಾಡಿದ್ದು ಉಂಡದ್ದು ಉಟ್ಟದ್ದು ಅಮೃತ. ಆಸಕ್ತಿಯಿಂದ ಮಾಡಿದ್ದು ಹೇಯ. ಬಂಧಕ, ಕಹಿ; ಅನಾಸಕ್ತಿಯಿಂದ ಮಾಡಿದ್ದು ಶ್ರೇಯ. ಮೋಚಕ, ಸಿಹಿ– ಅದು ಬಾಡದ ಹೂವಿನ ಪರಿಮಳದಂತೆ, ಅಳಿಯದ ಅಂಗನೆಯ ಅಧರಾಮೃತದಂತೆ. ಮಾಸದ ಮಧುರಸದ ದಿವ್ಯ ರುಚಿಯಂತೆ, ಹೇಯಭಾವವ ಬಿಟ್ಟು ಶ್ರೇಯ ಭಾವದಿ ಮಾಡುವ ಬುದ್ಧಿಯನು ಸಲಿಸು ಅಂತರಾತ್ಮಾ. ಇದೆ ಎಂದೆಂದಿಗೂ ಎನ್ನಂತರಂಗದ ಕೋರಿಕೆ.

ಸಂಸಾರ ಹೇಯವೆಂದೋಡುವರು ಸನ್ಯಾಸಿಗಳು. ಹೇಯವೆಂಬುದೇತಕೊ? ಸ್ವಲೀಲೆಗಾಗಿ ಆತ್ಮನು ರಚಿಸಿದ ರಂಗಸ್ಥಲವೀ ಸಂಸಾರ. ಲೀಲೆಗಾಗಿ ಕರಣಂಗಳೊಡನೆ ಆತ್ಮನು ಹೂಡಿದ ಹೋರಾಟವೀ ಸಂಸಾರ. ಇದನು ಬಿಟ್ಟು ಕಿವಿಯ ಮೇಲೆ ಕೈಯನಿಟ್ಟು, ಶಾಂತಂ ಪಾಪಂ ಎಂದು ಓಡಿದಡೆ ಹೇಡಿತನ ಎಮ್ಮ ಪಾಲಿಗೆ ಹೊರತು ಆಟಗಾರಿಕೆ ಇಲ್ಲ. ನೋಡಾ, ಬದಿಗೆ ಸರಿದು ತೆರೆ ಮರೆಯಾದಡೆ ವೇಷ ಭಿನ್ನವಾಯಿತಲ್ಲದೆ ಆಟ ಹಿಂಗಲಿಲ್ಲ, ಸಂಸಾರ ಬಿಡಲಿಲ್ಲ. ಆ ಕಾರಣ ಆತ್ಮನ ಆಹ್ವಾನ ಮನ್ನಿಸಿ ಅವ ಹೂಡಿದ ಆಟವ ಆಡಿ, ಕರಣಂಗಳ ಗೆದ್ದು ಪರಮ ಪದವಿಯ ಪಡೆಯುವ ಎದೆಗಾರಿಕೆಯ ಕೊಡಯ್ಯ, ಎನ್ನ ಶಿವಸಖೆ ಅಂತರಾತ್ಮಾ.

ಅಂ ಜುವರಳುಕುವರೀ ಸಂಸಾರಕ್ಕೆ. ಹೇಯವೆಂದು ಹೀಯಾಳಿಸುವರು ಜನನಮರಣಗಳ. ಅದೇಕೆ ಸ್ವಾಮೀ. ಇವರ ಪರಿ ಹೀಗೇಕೆ? ಇವರು ಹೋಗುವ ತಾವದೆಲ್ಲಿ ಈ ಸಂಸಾರವ ಬಿಟ್ಟು? ಇವರೆಲ್ಲಿರಬೇಕೆನ್ನುವರು ಜನನಮರಣವ ತೊರೆದು? ಇವುಗಳ ಬಿಟ್ಟು ನಿನ್ನನರಸುವರಂತೆ! ಅದು ಹೇಡಿಗಳ ಪಲಾಯನವಲ್ಲವೆ ಸಂಸಾರದಿಂದ. ನೀನಿಲ್ಲವೆ ಇಲ್ಲಿ. ನೀನಿಲ್ಲವೆ ಇವುಗಳಲಿ? ನಿನ್ನ ಲ್ಲಿ ಕಾಣದವರು ಅಲ್ಲಿ ಕಾಣಬಲ್ಲರೆ "ಮುಕ್ತಿ" ಎಂಬಲ್ಲಿ? ಅವ ರರಸುವ "ಮುಕ್ತಿ" ಆತ್ಮನ ಸಂತತ ಸಮಾಧಿಯಲ್ಲವೆ? ಎಲ್ಲೆ ಲ್ಲಿಯೂ ಇರುವ ನಿನ್ನ ನಂಬಿ. ನೋಡಿ ಸಮತೆಯಿಂದ ಸಂಸಾರ ದಲ್ಲಿರುವುದೆ ನಿಜ ಮುಕ್ತಿಯಲ್ಲವೆ. ಪ್ರಭುವೇ? ಅದನು ಬಿಟ್ಟು ಹುಡುಕುವವರು ಕಣ್ಣಿದ್ದು ಕುರುಡರು. ಕಿವಿಯಿದ್ದು ಕಿವುಡರು: ತಾಯ ತೊಡೆಯಲಿದ್ದು ತಾಯನರಸುವರವರು. ಇದು ನದಿಯ ಮೀನ ನೀರನರಸಿದ ಪರಿ. ಆಕಾಶದ ವಿಹಗ ವಾಯು ವನರಸಿದ ಪರಿ. ಈ ರೀತಿ ಎಂದೆಂದೂ ಮೋಸ ಹೋಗಿಸ ರಾ ಎನ್ನನು, ಅಂತರಾತ್ಮಾ ನೋಡಿದ್ದು ನಿನ್ನ ರೂಪ. ೕಳಿದ್ದು ನಿನ್ನ ಶಬ್ದ, ಮುಟ್ಟಿದ್ದು ನಿನ್ನ ಪಾದ, ಸವಿದದ್ದು ನ್ನ ಪ್ರಸಾದ, ಹೀಗೆ ಮಾಡಿ ಈಗಿದ್ದ ತಾವೆ ಮುಕ್ತಿ ಪದ ವೆಂಬಂತೆ ಕರುಣಿಸಯ್ಯ, ಮಹಾಸ್ವಾಮೀ.

ನಿನ್ನ ಕೂಡಿ ಮರಳಿ ಭವಕ್ಕೆ ಬಾರದಿರುವುದೆ ಮುಕ್ತಿ ಎಂಬರು. ನಿನ್ನ ಕೂಡಿ ಮತ್ತೆ ಭವದ ಭಯವೆ? ನಿನ್ನ ಕೂಡುವುದೇಕೆ ಆ ಮೇಲೆ? ನೀನೀ ಭವದಲ್ಲಿಲ್ಲವೆ? ಇಲ್ಲದಿರೆ. ಇಲ್ಲಿಯವರು ನಿನ್ನ ಕಾಣುವ ತಾವು ಅದಾವುದು? ಈ ಭವ ಬೇರೆ ನೀ ಬೇರೆಯೆ? ನೀನಿಲ್ಲದೆ ಭವವಿರಬಲ್ಲುದೆ? ನೀ ಬೇರೆ ನಿನ್ನ ಶಕ್ತಿ ಬೇರೆಯೆ? ನೀ ಬೇರೆ ನಿನ್ನ ಲೀಲೆ ಬೇರೆಯೆ? ಲೀಲೆಯಿಲ್ಲದೆ ನೀನಿರುವೆಯಾ. ಇರಬಲ್ಲೆಯಾ? ಇನ್ನು, ಮುಕ್ತಿ ಮುಕ್ತಿ ಎಂದು ಬಡೆದುಕೊಂಡು ನಾನೊಬ್ಬ ಭವಮುಕ್ತನಾದರಾಯಿತೆ. ಸ್ವಾಮೀ? ನನ್ನ ಬಾಂಧವರು ನನ್ನ ಹಡೆದವರು ಪಡೆದವರು, ನನ್ನೊಡನೆ ನಡೆದವರು, ಅವರೆತ್ತ ಹೋಗಬೇಕು? ಅವರನು ಬಿಟ್ಟು ನಿನ್ನತ್ತ ನಾ ತೆರಳಬೇಕೆ? ನನಗೊಬ್ಬನಿಗೆಯೆ ಆಗಬಲ್ಲುದೆ ಮುಕ್ತಿ? ಬೇಡ ದೇವಾ ಎನಗೆ ಬೇಡ ಆ ಮುಕ್ತಿ. ಎಲ್ಲರನು ಇಲ್ಲಿ ಬಿಟ್ಟು ಇಲ್ಲಿಲ್ಲದ ನಿನ್ನನು ಕೂಡುವ ಮುಕ್ತಿ ಬೇಡೆನಗೆ. ಒಮ್ಮೆ ಸ್ವಾರ್ಥ ಬಿಟ್ಟು ಮತ್ತೆ ಸ್ವಾರ್ಥವನರಸಬಹುದೆ? ಇಲ್ಲ, ಇಲ್ಲ. ನೀನಿಲ್ಲಿಯೆ ಈ ಭವದಲ್ಲಿಯೆ ಇರುವೆ, ನಿನ್ನನಿಲ್ಲಿಯೆ ಕಾಣುವೆ, ಕೂಡುವೆ. ಎಲ್ಲೆಲ್ಲಿಯೂ ಇರುವ ನಿನ್ನನು ಎಲ್ಲರನೊಡಗೂಡಿ ಕೂಡುವೆ. ಕೂಡಿ ನಿನ್ನೊಡನಾಡುವೆ, ಆಡಿ ನೀ ಹೂಡಿದಾಟವ ಸಾರ್ಥಗೊಳಿಸುವೆ. ಇಂಥ ಇಹ–ಮುಕ್ತಿಯ ಮಾರ್ಗವ ತೋರಾ ಎನಗೆ, ಅಂತರಾತ್ಮಾ. .

೧೮



ಪಾ. ಈಗ ತಿಳಿಯಿತೆನಗೆ ನಿನ್ನ ಬಿಟ್ಟು ನನ್ನ ದೆಂದು ಮಾಡಿದುದಕೆ ಈ ಪರಿ ಭಾರವಾಯಿ ತೆನಗೆ ಸಂಸಾರ. ಎಷ್ಟು ಅಂದಚೆಂದವಿದ್ದ ರೇನು. ಯಾವ ಸೌಭಾಗ್ಯವಿದ್ದರೇನು. ತನ್ನ ಲ್ಲ ಕಣ್ಮರೆಯಾದೊಡೆ ಸುಂದರಿಯು ಸೊಗಸುಳಿಯುವುದೆ? ಪ್ಪಿಲ್ಲದ ಊಟ ರುಚಿಯೆ. ರಸವಿಲ್ಲದ ಸೊಲ್ಲು ಸವಿಯೆ? ಬಗೆಯಾಯಿತೆನ್ನ ಬಾಳ್ವೆ. ನಿನಲ್ಲದೆ. ದೇವಾ. ಇನ್ನು ಎಲ್ಲ ನ್ನದೆಂದು ಮಾಡಿ ನಿತ್ಯ ನಿನ್ನ ಸಂಗದಲ್ಲಿರುವಂತೆ ಾಡಯ್ಯಾ, ಅಂತರಾತ್ಮಾ.

ಈ ದೇಹ ಪ್ರಾಣ ಮನಗಳೆಲ್ಲ ನಿನ್ನ ಮನೆ. ನಿನ್ನ ಮಠ. ನಿನ್ನ ಮಂದಿರಗಳಲ್ಲವೆ ಸ್ವಾಮೀ? 'ನಾನು' ಎಂಬ ಗಂಟುಗಳ್ಳ ಇಲ್ಲಿ ಹೊಗಲೇಕೆ? ಹೊಕ್ಕು ಹಾವಳಿ ಮಾಡಲೇಕೆ? ಹೊರಗೆ ಹಾಕಬಾರದೆ ಶಾಂತಿಸಮಾಧಾನಗಳಿಗೆ ಮುಳುವಾದ ಈ ಸುಳ್ಳು ಕಳ್ಳನ ಕೈಕಾಲ ಕಟ್ಟಿ ಇನ್ನೊಮ್ಮೆತ್ತ ಬಾರದಂತೆ ಇನ್ನೊಮ್ಮೆತ್ತ ಇಣಕಿ ನೋಡದಂತೆ? ಸಹಿಸಕೂಡದು. ಇನ್ನು ಈ ಆಗಂತುಕನ ಪುಂಡಾಟಿಕೆಯು, ಅಂತರಾತ್ಮ.

೨೦

ನ್ನನು ಪೀಡಿಸುವ ದಾನವ ನಾನೆ ಇರುವೆನಲ್ಲಾ. ಪ್ರಭುವೇ. ನನ್ನ ಹಗೆ ನಾನೇ ಆದೆನಲ್ಲಾ. ದೇವಾ! ನಾನು ನಾನು ಎಂಬ ಅಹಂಗೀತವೆ ಎನ್ನನು ಕೆಡಿಸಿತು. ಎನ್ನ ಹಾದೀ ಬಿಡಿಸಿತು. ತಿ ಸುಖವ ಮರೆಯಿಸಿ ಸಟೆಯಲ್ಲಿರಿಸಿತು. ಈ ಎನ್ನ ಕಣ್ಣ ಲೆ ಎಂದು ಹರಿಯುವುದು, ದೇವಾ? ಆ ದುರುಳ 'ನಾನು' ಬವನನು ಕೊಲ್ಲುವ ಪುಣ್ಯ ಎಂದು ಲಭಿಸುವುದೆನಗೆ? ದು ಬೆಳಗಾಗುವದಾ ಸುದಿನ? ನನ್ನ ನಾನೇ ಕೊಂದು ಎನ್ನ ದೆದೆಯ ಮೇಲೆ ನಿನ್ನ ಪ್ರಾಣ ಪ್ರತಿಷ್ಠೆಯ ಮಾಡಿ ನೋಡಿ ಯುವ ಮಂಗಲ ಪ್ರಸಂಗವನೆಂದು ತೋರುವಿ ಎನಗೆ. ತರಾತ್ಮಾ? ಈ ಮರಣಮಯ ಜೀವನದಿಂದ ಕಿತ್ತಿ ಆ ವನಮಯ ಮರಣದಲ್ಲಿರಿಸಯ್ಯಾ, ಈ ಆತುರ ಜೀವನನ್ನು. ಮೀ. ತೋರಯ್ಯಾ ಆ ಹೊಸ ಜೀವನವನ್ನು. ಕುಡಿಸಯ್ಯಾ ಅಮೃತವನ್ನು.

ಅರಿವುಗುರುಡ ನಾನಯ್ಯ. ನಿಜಗಾಣದ ಅಂಧಕ ನಾನಯ್ಯ. ಎಂದಿಗೂ ' ನಾನು ' ಎಂಬ ಗದ್ದುಗೆಯನೇರಿ ನೋಡುವ ಮೂಢ ನಾನಯ್ಯ. ಈ ವಿಶಾಲ ವಿಶ್ವದ ಕರ್ತೃಭರ್ತನಾದ ನಿನ್ನನೆ ನೋಡದ ಮಹಾಮೂರ್ಖ ನಾನಯ್ಯ. ನಾನು ನನ್ನದೆಂದು ಹಗಲಿರುಳು ನೊಂದು ಬೆಂದು ಬೆಂಡಾಗುವೆನಯ್ಯ. ಹೊರಗಣ್ಣನು ಮುತ್ತಿದ ಮಾಯೆ ಕಾಡಿಸಿ ಪೀಡಿಸಿ ಹೊಡೆಗೆಡಿಸಿತ್ತು. ದೇವಾ. ಸಾಕು ಸ್ವಾಮೀ ಇನ್ನು ಈ ಮರುಳ್ತನ. ಒಳಗಣ್ಣ ತೆರೆಯಿಸಿ ಬೆಳಗ ಬೀರಿ, ನಿಜವ ಸಾರಿ, ನಿನ್ನ ತೋರಿ, ಕರುಣಿಸಯ್ಯಾ. ಅಂತರಾತ್ಮಾ.

ಆಡಿದ ಮಾತು ಮರಳದು. ಒಡೆದ ಮುತ್ತು ಒಂದಾಗದು. ಹರಿದ ನೀರು ಮತ್ತೆ ತಿರುಗದು ಹೋದ ಕ್ಷಣ ಪುನಃ ಬಾರದು. ಎಲೆ ಎನ್ನ ಜೀವಾ, ವ್ಯರ್ಥ ಕಾಲವನೇಕೆ ಕಳೆಯುವಿ?
ರಿತುಕೊ ನಿನ್ನಾಳವನು, ನಿನ್ನರ್ಥವನು, ನಿನ್ನಿರವಿನುದ್ದೇಶ
ನು. ಕಾಯ ಕಂದಿ ಕರಿಗೊಳ್ಳುವ ಮುನ್ನ. ಮನ ಭಾವ
ಳ ಬಲವಳಿಯುವ ಮುನ್ನ. ಬಾಳು ಹಾಳಾಗುವ ಮುನ್ನ ನಿನ್ನ
ನರಿತು. ಅರಿವು ಒರೆದ ವೀರಕರ್ಮ ಮಾಡಿ ಕೃತಾರ್ಥನಾಗು
ರುಳ ಜೀವಾ. ಈಗ ಈ ಬಾಳು ಒಂದು ಬರಿಯ ಭಾಂಡ.
ರನೊಲ್ಲ ಎನ್ನ ಅಂತರಾತ್ಮನು. ಸದ್ಭಾವ ಸಕ್ರಿಯೆಗಳ ರಸ
ಂಬಿ ಒಡೆಯನಿಗರ್ಪಿಸಿ ಧನ್ಯಗೊಳಿಸು ಈ ಜೀವವನು ಬೇಗ,
ಲೆ ದೇವಾ.

ನಾ ಬಲ್ಲೆ ನಿನ್ನ ನಿಜಗುಣವ ಸ್ವಾಮೀ. ಶ್ರಾಂತ
ಸಖನಲ್ಲದೆ ನೀನು ಸೋಮಾರಿ ನಿರ್ಬಲರ ಸೊ
ಯಯ್ಯಾ. ನೀನೊಡ್ಡಿದ ಎಡರುಗಳೊಡ
ನನಗಿದ್ದ ಬಲದಿಂದ ಕಲಿಯಂತೆ ಕಾದಾಡಿ ದ
ಯುವ ಮುನ್ನ ನಾ ಶರಣೆನ್ನೆ. ಮೊರೆ ಹೋಗೆ ನಿನಗೆ. ದೇವಾ
ಕೈಲಾಗದ. ಅಳಿಮನದ, ಹೇಡಿಯ ಶರಣಲ್ಲ ಎನ್ನದ
ಪ್ರಭುವೇ. ಎನ್ನ ಶರಣು ಶ್ರಾಂತ ಪರಾಕ್ರಮಿ ವೀರನ ಶರಣು
ನೋಡೊಮ್ಮೆ ಎನ್ನತ್ತ. ಕಾದಿ ಕೈ ಸೋತಿವೆ, ಉಸುರ
ಕಟ್ಟಿದೆ, ಕಣ್ಣೀರಿನಿಂದ ಮೈ ಮುಚ್ಚಿದೆ, ಈಗ ಶರಣ
ಶರಣೆನ್ನುವೆನು. ಬಾ ಬೇಗ, ಕೈ ನೀಡಿ ಕಾಯು ಎನ್ನನು
ಅಂತರಾತ್ಮಾ; ಈ ಪಾಪಪುರುಷನೊಡನೆ ನಾನು ಹೂಡಿದ
ಹೋರಾಟದಲಿ ಸೋಲು ಅವಗೆ, ಗೆಲುವೆನಗೆ ಆಗಲೇ ಬೇಕು

ಶುಭಸಂಧ್ಯಾಸಮಯ. ಜೀವಸಂಕುಲದ ವಿಶ್ರಾಮ ಸಮಯ ಇದು ಸ್ವಾಮೀ. ಈ ಹೊತ್ತು ಎನ್ನ ಹೃದಯಕವಾಟವನು ತೆರೆದಿಟ್ಟು ಕಾಯುತ್ತಿರುವೆ ನಿನ್ನ ಹಾದಿಯನು. ನಿನ್ನ ಸ್ಮರಣವೇ ಎನಗೆ ವಿಶ್ರಾಂತಿದರ್ಶನ, ನಿನ್ನ ದರ್ಶನವೆ ಎನಗೆ ಸ್ವರ್ಗಸುಖ. ನಿನ್ನ ಸಂಗಸುಖವೆ ಎನಗೆ ಅಮೃತಜೀವನ. ಬಾ ಎನ್ನ ಒಡೆಯಾ. ಬೆಳಕು ಬೀಗುವ ಮುನ್ನ, ಕತ್ತಲೆ ಕವಿವ ಮುನ್ನ, ದುರ್ವಿಕಾರಗಳ ಕೋಲಾಹಲವೇಳುವ ಮುನ್ನ ಎನ್ನ ಹೃದಯಮಂದಿರವ ಪ್ರವೇಶಿಸು. ನೀ ಬರುವಿ ಎಂಬ ಆಸೆ ಎನ್ನ ಜೀವನಕ್ಕಾಧಾರ. ನೀ ಬಂದುದ ಕಂಡರೆ ಉಲ್ಲಾಸವುಕ್ಕುವುದೆನ್ನಲ್ಲಿ. ನೀ ಬಂದರೆ ಹೊಲ್ಲವನೆಲ್ಲವ ಗೆದ್ದುನಿಲ್ಲುವೆ ನಾನು. ನೀ ಬಾರದಿದ್ದರೆ ನನ್ನ ನೆಳಲು ನನಗೆ ಮಾರಿ. ಕಾದಿರುವ ಸೇವಕನ ಕೈ ಬಿಡಬೇಡ ಸ್ವಾಮೀ, ನಿನ್ನ ನಂಬಿದ ಭಕ್ತನ ಕಾಡಬೇಡ ಅಂತರಾತ್ಮ. ಬೇಗ ಕರುಣಿಸು ಹಿರಿಯಾ, ಕರುಣಿಸಿ ಕಾಪಾಡು.

೨೫



ಏಕೀ ಆಲಸ್ಯ? ಅದೇಕೆ ಇಷ್ಟೊಂದು ದಣಿವು ? ಅದೆಲ್ಲಿಂದ ಬಂದುದೀ ಬೇಸರ? ಎನಗೆ ಶಕ್ತಿ ಇಲ್ಲವೆ, ಸಾಮರ್ಥ್ಯವಿಲ್ಲವೆ? ನೀನೆನಗೆ ಕೈಕಾಲ ನಿತ್ತಿಲ್ಲವೆ, ಮಾಡಿ ಮುಟ್ಟಿ, ದುಡಿದು ದಣಿದು ಜೀವಿಸಬೇಕೆಂದು ಹೇಳಿಲ್ಲವೆ? ಆದರೇನು. ಎನ್ನ ದುಡಿತವೆಲ್ಲ ವ್ಯರ್ಥವೆಂದು ತೋರುವುದೆನಗೆ. ಎನ್ನ ಯತ್ನವೆಲ್ಲ ನಿಷ್ಫಲ ವೆಂದು ತೋಚುವುದೆನಗೆ ಅದೇಕೆ ದೇವಾ? ಹೀಗೇಕೆ ದೇವಾ? ಹೇಳಬಾರದೆ ಎನಗೆ? ಹುಟ್ಟಿಸಬಾರದೆ ರಾಗರಸ ರುಚಿಗಳನ್ನು ಈ ಎನ್ನ ಅವಶ್ಯಕರ್ಮದಲ್ಲಿ? ಇಷ್ಟೊಂದು ಅವ ಕೃಪೆ ಏಕೆ? ಇನ್ನೇಸು ದಿನ ನಡೆಯಿಸಲಿ ಈ ಯಾಂತ್ರಿಕ ಜೀವನವ? ಕರ್ಮಾನಂದದ ದಾರಿಯ ತೋರಾ ಎನಗೆ, ಅಂತರಾತ್ಮಾ. ಕರ್ಮಭಾರವನಿಳುಹಿ, ಕರ್ತವ್ಯಭಾವದಾಚೆ ದಾಟಿಸಿ, ಲೀಲೆಯ ಪೂಮಾಲೆಯ ತುಡಿಸಯ್ಯಾ. ಸ್ವಕರ್ಮವನೆ ಲೀಲೆ ಎಂಬ ಭಾವದಿ ಮಾಡುವ ಮನಸನ್ನು ಕೊಡಯ್ಯಾ, ಪ್ರಭುವೆ.

೨೬

ಏನಿದು, ಎನ್ನ ಮನದ ದುರ್ಬಲತೆ ದೇವಾ? ಸ್ವಲ್ಪ
ಜಡ್ಡಾದೊಡನೆ ಸಾಯುವೆನೋ ಬದುಕುವೆನೊ
ಎಂಬ ಎದೆಗುದಿ ಎನಗೆ? ಎಂತಹ ಅಳಿಮನ
ವಿದು? ಸಮತೂಕವಿರುವ ಪಂಚ ಭೂತಗಳರಿ
ವೆ ತಮ್ಮ ಕಾರ್ಯವ ಈ ದೇಹದಲ್ಲಿ? ಪಂಚ ಪ್ರಾಣಗಳರಿ
ವೆ ತಮ್ಮ ಪ್ರಮಾಣವ? ಮೇಲಾಗಿ ನೀ ನೋಡಲರಿ
ಯಾ ನಿನ್ನವರ ಕ್ಷೇಮವ ? ನಾ ಮಾಡುವ ಚಿಂತೆ ಎಲ್ಲಿಗೆ
ಟ್ಟಬಲ್ಲದು? ಭೂತಗಳು ದೆಸೆಗೆಟ್ಟರೆ ನಾನವನ್ನು ಒಟ್ಟಿ
ಬಲ್ಲೆನೆ? ಪ್ರಾಣಗಳು ಹರಿದು ಹೊರಟರೆ ನಾನವನ್ನು
ತೆಯಲಾಪೆನೆ? ಎನ್ನ ಘಾತಕ್ಕೆ ನೀನೊಪ್ಪಿದೊಡೆ ನಾ
ಯಲಮ್ಮೆನೆ ಈ ಕಾಯ ಜೀವಗಳನು? ಎಂತಹ ತಿಳಿಗೇಡಿ
ನು! ವ್ಯರ್ಥ ಚಿಂತೆಯಲ್ಲಿ ಚಿತೆಯಲ್ಲಿ ಸುಡುತಿರುವೆನಲ್ಲಾ
ವ ಮುನ್ನವೆ! ಕಾಡ ಹೂವಿನಂತೆ, ಹಾರುವ ಹಕ್ಕಿಯಂತೆ
ನ್ನನೆ ನಂಬಿ ನಿಶ್ಚಿಂತನಾಗಿ ನಲಿಯುವ ಹಾಗೆ ಮಾಡಯ್ಯ
ನ್ನನು, ಅಂತರಾತ್ಮಾ.

ಆ ಧರ್ಮ, ಈ ಧರ್ಮ, ನಾ ಧರ್ಮಿ, ನೀ ಧರ್ಮಿ ಎಂದೆಲ್ಲರೂ ಮೆರೆಯುವರಲ್ಲಾ ಸುತ್ತಲೂ ನಿನಗೊಪ್ಪಿತವೆ ಈ 'ಧರ್ಮ' ದೇವರ ದೇವಾ? ತುಲಸೀಮಣಿ, ಪಟ್ಟೆನಾಮ, ರುದ್ರಾಕ್ಷಮಾಲೆ, ವಿಭೂತಿಪಟ್ಟೆ, ತ್ರಿಕಾಲ ಮಜ್ಜನ, ಅಡಿಗಡಿಗೆ ಮಡಿ ಮುಂತಾದ್ದರಿಂದ ಧರ್ಮಿ, ಧರ್ಮಿ ಎಂಬರು. ನೇಮದಿಂದ ಗುಡಿಗುಂಡಾರಗಳನೆ ಹೊಕ್ಕು ನಿನಗೆ ಭೆಟ್ಟಿಯಾಗುವೆವೆನ್ನುವರು. ಪರಿಕಿಸಿರುವಿಯಾ ಈ ನಿನ್ನ ಅಪರಿಮಿತ 'ಭಕ್ತ' ಸಂದೋಹವ ಪ್ರಭುವೆ? ಧರ್ಮ ವೇನುವೇಶಿಯ ವೇಷವೆ, ರಂಗದ ನಟನೆಯೆ ಈ ಪರಿ ಎಲ್ಲರೂ ಧರ್ಮಮೂರ್ತಿಗಳಾಗಲು ? ಕಾಯ ಶುದ್ಧವಿರಬೇಕಯ್ಯಾ ನಿನ್ನೆಡೆಗೆ ಬರಲು. ಪರಧನ ಪರಸ್ತ್ರೀ ಪರಪೀಡೆ ದೂರವಿಟ್ಟು, ಆರ್ತಸೇವೆ ಮಾಡಿ, ಸತತ ಸ್ವಕರ್ಮನಿರತರಿದ್ದು; ವಾಣಿ ಶುದ್ಧ ವಿರಬೇಕಯ್ಯಾ ನಿನ್ನ ನಾಮ ನುಡಿಯಲು. ಪರನಿಂದೆ ಬಿಟ್ಟು ಪರಗುಣ ಪರಮಾಣುವ ಪರ್ವತ ಮಾಡಿ; ಮನ ನಿರ್ಮಲವಿರಬೇಕಯ್ಯಾ ನಿನ್ನ ಸ್ಮರಿಸಲು. ಕುಕಲ್ಪನೆ ಕಳೆದು ಸುಕಲ್ಪನೆ ತಳೆದು; ಭಾವ ಶುದ್ಧವಿರಬೇಕಯ್ಯಾ ನಿನ್ನ ಭಾವಿಸಿ ನಿನ್ನಲ್ಲಿ ಲೀನವಾಗಲು, ಸತ್ ಸಾಕ್ಷಿಯಾಗಿ, ಪ್ರೇಮಪೂರ್ಣನಾಗಿ, ಸಕಲ ದಯಾಪರನಾಗಿ, ಇದಿಲ್ಲದ ಧರ್ಮ ಡಂಭಾಚಾರ, ಡೊಂಬರ ಆಟ ಹೊರತು ಧರ್ಮವಲ್ಲ. ಈ ಅಧರ್ಮವ ಬಿಡಿಸಿ ನಿಜ ಧರ್ಮದಲಿರಿಸಯ್ಯಾ ಎನ್ನನು ಅಂತರಾತ್ಮಾ.

ನೀ ಹೇಳಿದದು ಜನಸೇವೆ, ಜನತಾಜನಾರ್ದನ ಸೇವೆ, ಸ್ವಾಮಿ, ಜನಸೇವೆಯೆ ನಿನ್ನ ಸೇವೆ ಎಂದು ಸಾರಿರುವಿ ನೀನು. ಆದರೇನು ? ನಾನೇನದನು ಮಾಡಬಲ್ಲೆ ನಿನ್ನ ಕರುಣವಿಲ್ಲದೆ ದೇವಾ, ನೆಷ್ಟು ಮಾಡಬಲ್ಲೆ ನೀನು ಕೈ ಕೊಡದೆ ದೇವಾ, ನಾನೆಂತು ಾಡಬಲ್ಲೆ ದೇವಾ? ಅಯ್ಯೋ. ಈ ಜನರಲ್ಲಿ ಮುಸುಕಿದ ಜ್ಞಾನವ, ಈ ದಾರುಣ ದಾರಿದ್ರ್ಯವ, ಈ ದುರುಳತನವ ಈ ಹಾದೈನ್ಯವ, ನಾನೇನು ಕಳೆಯಲಾಪೆನು, ಪ್ರಭುವೇ? ದುಂಧ ತೊಡೆಯಲು ಹೊನ್ನೀಹುಳ ಹೊರಟಂತಾಯ್ತು, ಥ್ವಿಪ್ರದಕ್ಷಿಣೆಗೆ ಇರುವೆ ಕಾಲಿಟ್ಟಂತಾಯ್ತು, ವೇದವ ೇವಲು ಮೂಢ ಮೊದಲು ಮಾಡಿದಂತಾಯ್ತು, ಎನ್ನ ಪರಿಯ ಪ್ರಯತ್ನ ಸ್ವಾಮೀ! ನಗೆಗೀಡು ಮಾಡಲು ಹೇಳಿ ಯಾ ಎನಗೆ ಈ ಕಾರ್ಯವ? ಎನ್ನ ಕೀಳ್ತನವ ಕೈಮಾಡಿ ೀರಿಸಲು ಬೆಸಸಿದೆಯಾ ಎನಗೆ ಈ ಕೆಲಸವ ? ಎನ್ನ ಕವ ನೋಡಿ ಹೇಳಬಾರದೆ ತಂದೆ, ನನಗೆ ನಾ ಮಾಡುವ ಟವ? ಇನ್ನು ಹಾದೀ ತೋರು ನೀ ಬೆಸಸಿದ ಕಾರ್ಯವ ನೇ ಮಾಡಿಸಿ ಎನ್ನನು ಧನ್ಯಗೊಳಿಸು ಅಂತರಾತ್ಮಾ.

ಎಲೆ ಜೀವಾ, ಗಾಬರಿಗೊಳ್ಳಬೇಡ. ಸಾವು ಸುತ್ತಲು ಕುಣಿದರೇನು, ಪ್ರಾಣ ತಾ ಬದುಕಲೆತ್ನಿಸದೆ? ತಮಂಧ ಮುಸುಕಿದರೇನು, ತಾರಕೆ ತನ್ನ ತೊಳಗೆ ತೊರೆಯುವುದೆ? ಕತ್ತಲೆ ಕಳೆಯದಿದ್ದರೇನು, ದೀಪ ತಾ ಮಿಣುಕಲರಿಯದೆ? ಎಷ್ಟು ಅಜ್ಞಾನವಿದ್ದರೇನು, ನಿನ್ನ ಅಂತರ್ಜ್ಯೋತಿಯ ಬೆಳಕಿನಿಂದ ಸಾಗಿ ಜನರಿಗೆ ದಾರಿ ತೋರು, ಜೀವಾ, ಧೈರ್ಯಗೆಡಬೇಡ. ಎಷ್ಟು ಬಡತನವಿದ್ದರೇನು, ನಿನ್ನ ಬದುಕ ಹಂಚಿಬಾಂಧವರ ಹಿತ ನೋಡು. ಎಷ್ಟು ದುರಳತನವಿದ್ದರೇನು, ಸಜ್ಜನತನದ ಸತ್ಯಧ್ವಜವನೂರು. ದೈನ್ಯವೆಷ್ಟಿದ್ದರೇನು, ಎದೆ ಗಟ್ಟಿಮಾಡಿ ಎಲ್ಲರಲ್ಲಿ ಉತ್ಸಾಹವ ತುಂಬು. ದಿನಕೊಂದು ಹೆಜ್ಜೆ ಮುಂದೆ ಸಾಗಿದರೆ ಸಾಲದೆ ನಿನಗೆ? ಅದೇ ನಿನ್ನ ಕರ್ತವ್ಯ, ಜೀವಾ. ಅದನು ಮಾಡಿ ಅಂತರಾತ್ಮನ ಆಶೀರ್ವಾದ ಪಡೆದು, ಧನ್ಯನಾಗು ಎಲೆ ಜೀವಾ, ಏಳು, ಎದೆಗಾರನಾಗಿ ಮುಂದೆ ನಡೆ.

ಅಯ್ಯೋ, ಅಯ್ಯೋ, ಇನ್ನೇನು ಮಾಡಲಿ? ಇಳಿ ಹೊತ್ತಾಯಿತು. ಸಂಜೆ ಸಮೀಪಿಸಿತು. ದಾರಿ ನಡೆಯದೆ ವ್ಯರ್ಥ ಕಾಲವ ಕಳೆದೆನಲ್ಲಾ ಸ್ವಾಮೀ. ಅತ್ತ ಮನೆಯೂ ದೂರ ಇತ್ತ ಂದಿರವೂ ದೂರ. ನಟ್ಟಡವಿಯಲಿ ಕತ್ತಲೆ ಕವಿವ ಕಾಲ ಗಿತಲ್ಲಾ! ಹಾದಿಯು ಹೆಣವಾಗುವ ಹೊತ್ತು ಬಂದಿತಲ್ಲಾ! ಯ್ಯೋ, ಇನ್ನೇನು ಗತಿ? ದೇವಾ, ದೇವಾ, ಎಂತಹ ಹುಡುಗ ದ್ಧಿ ಎನ್ನದು? ಕಾಡ ಹೂಗಳ ಹರಿಯುತ, ಗಿಡಬಳ್ಳಿಗಳ ೀಡುತ, ಹಕ್ಕಿಗಳ ಹಾಡ ಕೇಳುತ ದಿನವ ನೂಕಿದೆನಲ್ಲಾ, ತೋರಿದ ದಾರಿಯ ನಡೆಯದೆ. ಇನ್ನಾರು ಗತಿ ಎನ್ನಂ ವೈಗಳ್ಳನಿಗೆ ಅಂತರಾತ್ಮಾ ನೀನಲ್ಲದೆ? ಮುಟ್ಟಿಸಬಾರದೆ ನು ಆ ಸುಂದರ ಮಂದಿರಕೆ, ಎಲ್ಲರೂ ಅರಸುವ ಆ ಅಂದ ದ ಆತ್ಮಮಂದಿರಕೆ ? ಅಲ್ಲಿ ಹೃದಯೇಶ್ವರನ ಮುಂದೆ ಡೆಗೆಡುವೆ, ಅವನ ಚರಣದ ಮೇಲೆ ಉರುಳಾಡಿ ತಪ್ಪ ನೊಪ್ಪಿಕೊಳ್ಳುವೆ, ಕ್ಷಮೆ ಕೇಳುವೆ. ಮತ್ತಿನ್ನೇನ ಮಾಡ ಗುವದು, ಇನ್ನಾವ ದಾರಿ ಇರುವುದೆನಗೆ ಮಹಾಪರಾಧಿಗೆ, ಮೀ? ಒಯ್ಯಿ ಒಯ್ಯಿ, ಎನ್ನನು ಅಲ್ಲಿ, ಹೊತ್ತು ಮುಳು ಮುನ್ನ, ದಾರಿ ಕಾಣದ ಹಾಗಾಗುವ ಮುನ್ನ. ನಟ್ಟಡವಿ ಲ್ಲಿ ಕೈ ಬಿಡಬೇಡ ಅಂತರಾತ್ಮಾ.

೨೧

ಒಡೆಯಾ, ಎನ್ನ ಮಾನಸಸರೋವರದ ರಾಜಹಂ
ನಾಗಿ ನೀನು ಎಂದು ವಿರಾಜಿಸುವೆ, ಹೇಳ
ಪ್ರಭುವೇ. ಒಮ್ಮೆ ಹೇಳಿ ಎನ್ನ ಆತುರವ ಅರಿಸ
ಸ್ವಾಮೀ. ನೋಡು, ನೋಡು, ಒಮ್ಮೆಯಾದರೂ
ನೋಡು, ಈ ಎನ್ನ ಮನದ ಸ್ಫಟಿಕ ಶಿಲೆಯಲ್ಲಿ ನಿಂತ ನಿರ್ಮ
ಭಾವದಲ್ಲಿ ಮೂಡಿ ಒಮ್ಮೆಯಾದರೂ ಎನಗೆ ನಿನ್ನ ಬಿಂಬ
ತೋರು. ಒಂದರೆಕ್ಷಣವಾದರೂ ಇಣಕಿ ಹೋಗು. ಅಕೋ
ಈ ಶಾಂತ ಸರಸ್ಸಿನಲ್ಲಿ ನೀಲ ನಭದ ಛಾಯೆ. ಅದೇ ನಿನ್ನ
ಪೀಠ. ಅಕೋ, ಅದರಲ್ಲಿ ಕಮಲಗಳು ನಿನ್ನ ಹಾದಿಯ
ಉತ್ಕಂಠಿತನಾಗಿ ನೋಡುತಿವೆ. ಸ್ವಾಮೀ, ಎಷ್ಟೊಂದು ಕಷ್ಟ
ಪಟ್ಟಿರುವೆ ನಾನು ಎನ್ನ ಮಲಿನ ಮನವ ವಿಮಲ ಮಾಡಲು
ನೀ ಬರಬೇಕೆಂದು, ನಾನು ನಿನ್ನನು ಕಾಣಬೇಕೆಂದು ಇ
ತೊಂದು ಸಾಹಸ, ಇಷ್ಟೊಂದು ಸಿದ್ಧತೆ, ನೀ ಬಾರದಿರೆ—
ಅಯ್ಯೋ ಬೇಡ ಆ ಮಾತೇ ಬೇಡ,— ಆ ಅಮಂಗಲ ಅಶುಭ
ಕಲ್ಪನೆಯೆ ಬೇಡ. ನಿನ್ನಾಶೆಯಿಂದ ಎನ್ನ ಬಾಳ್ವೆ. ಆ
ತಂತುವನು ಹರಿಯಬೇಡ ದೊರೆಯೇ, ಬಳ್ಳಿಗಾಧಾರವಾ
ಗಿಡವನು ಕಡಿಯಬೇಡ, ಕಗ್ಗತ್ತಲೆಯಲಿ ಕಾಣುವ ಒಂದೇ ಕಿರಣ
ವನು ಕಳೆಯಬೇಡ ಸ್ವಾಮೀ. ತಡೆಯುವೆ. ಕಾಯುವೆ, ಹಾದಿ
ನೋಡುವೆ. ಜನ್ಮಜನ್ಮಾಂತರಗಳನಾದರೂ ತಾ


ನ್ನೊಮ್ಮೆ ಪಡೆವೆನೆಂಬ ಆಶೆ ಎನಗೆ. ಒಮ್ಮೆಯಾದರೂ
ಶ್ವಾಸಿಸು, ವಚನ ಕೊಡು, ಅಂದರೆ ಸಾಕು. ಅದೇ ಎನಗೆ
ವನಾಮೃತ. ಇಷ್ಟೊಂದು ಕರುಣಿಸು ಅಂತರಾತ್ಮಾ.

ಇವರಾರು, ಎನ್ನ ನಿನ್ನ ಸಲ್ಮೆಯ ಆಟಕೂಟಗಳ
ನಡುವೆ ಬರುವವರು, ಹೃದಯೇಶ್ವರಾ? ಹಗಲಿ
ರುಳು ಬೆನ್ನು ಬಿಡದೆ ಎನ್ನನು ಮೋಹಿಸಲೆತ್ನಿಸು
ವರು. ನಿನ್ನನು ಮರೆಯಿಸಿ, ಬದಿಗೆ ಸರಿಸಿ
ತಾವು ಎನ್ನಂತರಂಗದಲ್ಲಿ ಮನೆಮಾಡಬಯಸುವವರು. ನಾನ
ವರನೊಲ್ಲೆ, ದೇವಾ, ನೀನೇ ಅವರನು ಕಳುಹಿಸಿದ್ದರೂ ನಾನ
ವರನೊಲ್ಲೆ—ನಿನ್ನನು. ನಿನ್ನ ಛಾಯೆಯನು ಕೂಡ ಅವರಲ್ಲಿ
ನಾ ಕಾಣೆ. ನಿನ್ನನೆ ಅವರಲ್ಲಿ ಕಾಣುವತನಕ ನಾನಾರನೂ ಒಲ್ಲೆ
ನಾನಾವುದನೂ ಒಲ್ಲೆ, ನಿನೊಬ್ಬನನಲ್ಲದೆ. ನಮ್ಮವರು ನಿಮ್ಮ
ವರು ಎಂದು ಬಳಿಸಾರುವರಿವರು, ಅತಿ ನಿಕಟಕ್ಕೆ ಬಂದು
ಸಲಿಗೆಯ ಬೆಳೆಸುವರು. ತಂದೆ–ತಾಯಿ, ಮಡದಿ–ಮಕ್ಕಳು
ಅಣ್ಣ–ತಮ್ಮಂದಿರು. ಅಕ್ಕ–ತಂಗಿಯರು, ಗೆಳೆಯ–ಗೆಳತಿ
ಯರು, ಎಂದು ಹೇಳುವರಿವರು, ಆದರೇನು ದೇವಾ
ಅವರೆಲ್ಲ ಸೂರೆಗಾರರಲ್ಲವೆ, ನಿನ್ನನ್ನು ಕದ್ದೊಯ್ಯಲು ಬಂದ
ಕಳ್ಳರಲ್ಲವೆ ಅವರು? ಹೇಳು, ಹೇಳು, ನಿಜವ ಹೇಳು ಎನಗ
ಒಂದು ಬಾರಿ, ಅಂತರಾತ್ಮಾ. ಸಾಕು ಸಾಕಿನ್ನು ಇವರ ಸಂಗ
ಇವರ ಹಾವಳಿ ನಿಲಿಸಿ ನೀ ನೆಲೆಯಾಗು ಎನ್ನಲ್ಲಿ. ಪ್ರಭುವೆ
ಆಹಾ, ಏನು ಈ ಆಟ! ನಿನ್ನೊಡನಾಟ! ಈ ಪ್ರೇಮದ
ಕೂಟ! ಒಂದರೆಕ್ಷಣವಾದರೂ ಎಂತಹ ಸುಖಸಮಾಧಿ ಇದು
ನೀನೆ ಎಲ್ಲರಲ್ಲಿಯೂ ತೋರಿ ಅನಂತಕಾಲ ನಡೆಸಬಾರದೆ.
ಈ ಆನಂದದ ಆಟನೋಟವ ಎನ್ನ ಪ್ರಾಣೇಶ್ವರಾ?



ನಿನ್ನು ಕೇಳುವವನಲ್ಲ. ನಿನ್ನೆಡೆಗೆ ರಭಸದಿಂದ ಹೊರಟಿರುವೆ. ಬೇಡ, ಬೇಡ, ಸ್ವಾಮಿ, ಈ ಬಣ್ಣದ ಆಟಿಕೆಗಳನು ಎನ್ನ ಹಾದಿಯಲಿ ಹರವ ಬೇಡ; ಹುಡುಗನನು ಈ ಪರಿ ಮೋಸಗೊಳಿಸ
ಡ. ಹಸಿದ ಕೂಸನು ತಾಯ ಎಡೆ ಹೋಗಗೊಡು.
ನು ತಡೆದು ಒಣ ಪಾಪವ ಕಟ್ಟಿಕೊಳಬೇಡ. ಮಗು
ನೇನ ಮಾಡಬಲ್ಲುದು ಹೊನ್ನಿನ ಹೂಗಳನು ಬೀದಿಯಲಿ
ಅದನು ರಮಿಸಿದರೆ? ಪಾಪ, ಆಡಿ ಆಡಿ ಹೊತ್ತು ಕಳೆದು,
ಟ್ಟು ಹಸಿದು, ಹತಬಲವಾಗಿ ನಡು ಹಾದಿಯಲಿ ಬಾಯ
ೇವದು ತಾಯ ಹಾಲಿಗೆ! ಆ ಮರುಗು ಕಟ್ಟಿಕೊಳಬೇಡ
ಮಾ. ಬಿಡು ಈ ಛಲವ. ಬಿಲ್ಲಿನಿಂದ ಹೊರಟ ವೀರನ
ದಂತೆ ಎನ್ನನು ಬರಗೊಡು ನಿನ್ನೆಡೆಗೆ. ಎನ್ನ ನಿಶ್ಚಯವ
ನೆಗಾಣಿಸು, ಅಂತರಾತ್ಮಾ.

ರಾಜಕಾರ್ಯವ ಮಾಡಲು ಹೊರಟೆ! ದೊಡ್ಡ
ರಾಜಕಾರಣ ಪ್ರರುಷನಲ್ಲವೆ ನಾನು! ಏನು ನನ್ನ
ಸಂಭ್ರಮ ! ಈಗ ಎನ್ನ ಹೆಮ್ಮೆಯ ನೋಡಿ
ಎನಗೆಯೆ ನಗು ತುಂಬುತಿದೆ. ಯಾರು ಕೇಳ
ಬೇಕು ಎನ್ನನು, ಎನ್ನಿಂದೇನಾಗಬಲ್ಲದು, ಸ್ವಾಮೀ? ರಾಜ
ರಾಜೇಶ್ವರಾ, ನಿನ್ನನು ಕೇಳದೆ ಹೇಳದೆ, ನಿನ್ನ ಅಣತಿಯ ಪಡ
ಯದೆ ನಿನ್ನ ರಾಜ್ಯದಲಿ ಕೆಲಸ ಕೈಕೊಳ್ಳುವವ ನಾನಾರು?
ಇಷ್ಟೊಂದು ತಿಳಿಯಬಾರದೆ ಎನಗೆ ಪ್ರಭುವೇ? ನಿನ್ನೋಲಗವ
ತೋರು ದೇವಾ, ನಿನ್ನೋಲಗದಲಿ ತೊತ್ತಾಗಿರಿಸಿ ಎನಗ
ಕಾರ್ಯವ ಬೆಸಸು. ಎನ್ನಹಂಕಾರದಳಿತು, ಎನ್ನ ಸೊಕ್ಕು
ಮುರಿಯಿತು. ಇನ್ನು ಕೃಪೆಮಾಡಿ ಎನ್ನ ಕೈಯಿಂದಾಗುವ
ಕೆಲಸವ ಕೊಟ್ಟು ಕರುಣಿಸು ಅಂತರಾತ್ಮಾ. ಇನ್ನು 'ನಾ
ಮಾಡಿದೆ' 'ನಾ ಮಾಡುವೆ' ಎಂಬ ಜೊಳ್ಳು ನುಡಿಯನಾಡುವ
ದಿಲ್ಲ ಪ್ರಭುವೇ. ತಪ್ಪು ತಪ್ಪಾಯಿತು, ಕ್ಷಮಿಸು. ಕ್ಷಮಿಸು.



ಯ್ಯೋ. ಏನು ಹೇಸಿ ಜೀವನ ಎನ್ನದು ಈವರೆಗೆ! ನನ್ನ ಮನವೆಂದರೊಂದು ವೇಶಿಯ ವಿಲಾಸ-ವಾಟಿಕೆ ಇಲ್ಲವೆ ವ್ಯಭಿಚಾರಿಯ ಅಂತರ್ಗೃಹ. ಸಿಕ್ಕ ಸಿಕ್ಕವರು ಬಂದು ಬೇಕಾದ ಚಲ್ಲಾಟವ ಾಡಬೇಕು, ಆಡಬಾರದ ಆಟ, ನೋಡಬಾರದ ನೋಟ, ೂಡಬಾರದ ಕೂಟ, ಕ್ಷಣಿಕ ಸುಖಕ್ಕಾಗಿ ಎನ್ನ ಎಲ್ಲ ಮಾಟ ಾಯಿತಲ್ಲಾ. ಅಯ್ಯೋ ಈಗ ಮರುಗುವೆ ನಾನು. ನಾ ಾಳು ಮಾಡಿದ ದೇಹ ಮನಃಶಕ್ತಿಗಳ ಕಡೆಗೆ ನೋಡಿ ಎದೆ ೊಡಿಯುತಿದೆ, ಏನು ಮಾಡಲಿನ್ನು ? ಇದಕ್ಕುಪಾಯ ಲ್ಲವೆ? ಇನ್ನಾದರೂ ಬುದ್ಧಿ ಬರುವದೆ? ಸತೀತ್ವವೆ ನಿಜಸುಖದ ಧಿಯೆಂದು ಒಮ್ಮೆಯಾದರೂ ವೇಶಿಗೆ ತಿಳಿಯಲಾರದೆ? ಏಕ ತ್ನೀತ್ವವೆ ಸುಖಸಾಧನವೆಂಬುದು ವಿಟನಿಗೆ ಒಮ್ಮೆಯಾದರೂ ೊಳೆಯಲರಿಯದೆ ? ಹಾಗೆ ನನಗೆ ಹೊಳೆಯಬಾರದೆ ಏಕ ಷ್ಟ ಭಕ್ತನಾಗಬೇಕೆಂದು ? ಸಾಕಾಯ್ತು, ಅತ್ತಿತ್ತ ಅಲೆ ಾಡುವ ಈ ಅನುಭವ. ಹಾದಿಗೆ ಕೊಟ್ಟ ಬುತ್ತಿಯನು ಹಳಸಿಸಿ ಸಗೆಡಿಸಿದೆನು. ಎದುರಿಗನನ್ನಿರಿಯಲು ನೀ ಕೊಟ್ಟ ಅಲಗಿಂದ ಎನ್ನನೆ ಇರಿದುಕೊಂಡು ಗಾಸಿಯಾದೆನು ಸ್ವಾಮೀ, ಶ್ಚಾತ್ತಾಪವಾಯಿತು. ಇನ್ನು ನೀನೆ ಕರುಣಿಸಿ ಕಾಪಾಡು ಂತರಾತ್ಮಾ. ಎನ್ನ ಸೋತ ಮನವ ಸೆಳೆದು ನಿನ್ನೊಳು ೂಗಿಸು, ವಿಷವನು ಬಿಡಿಸಿ, ಅಮೃತವನುಣಿಸಿ ಬದುಕಿಸು ಬಾಲಕನನು ದೇವಾ.

ತರಾತ್ಮನಿಗೆ

ಸಂಸಾರದ ಆಸೆ ಹುಟ್ಟಿ ತೊಳಲುತಿರುವೆ, ದೇವ
ನಿನ್ನ ಆಸೆ ಬಲಿತು ಆಕಾಂಕ್ಷೆಯಾಗಿ ಎನ್ನ
ಹಗಲಿರುಳು ಪೀಡಿಸುತಿಹುದು, ಪ್ರಭುವ
ನಿನ್ನನು ನೋಡಬೇಕು, ನಿನ್ನನು ಕೂಡಬೇ
ನಿನ್ನೊಡನಾಡಬೇಕು ಎಂಬಾಸೆ ಎನ್ನ ಹೊಟ್ಟೆಯಲಿ. ಆ
ನಾ ಸ್ಥೂಲ ನೀ ಸೂಕ್ಷ್ಮ, ನಾ ಸಾಕಾರ ನೀ ನಿರಾಕಾರ,
ಜಡ ನೀ ಚೇತನ, ನಾ ಪಾಪಿ ನೀ ನಿಷ್ಪಾಪಿ, ನಾ ದುಃಖಿ
ಸುಖಿ, ಎನ್ನ ಕುಲವೆ ಬೇರೆ ನಿನ್ನ ಕುಲವೆ ಬೇರೆ. ಬೀಗ
ವಾಗುವ ಪರಿ ಯಾವುದು ದೇವಾ ಈ ಇಬ್ಬಗೆ ಇರುವಾ
ಎನ್ನಲ್ಲಿ ಅಸಾಧ್ಯ ಆಸೆಯನೂರಿ ಪೀಡಿಸುತಿರುವಿ, ದೇವ
ಇದು ಆನೆ ಆಗಸಕೆ ಹಾರಬಯಸಿದಂತೆ, ಕಾಗೆ ಹಂಸವಾಗಲಿ
ದಂತೆ, ಸ್ವಾಮಿ. ಇದು ತಿಳಿಯದೆ ಎನಗೆ? ಆದರೇನು,
ಬಯಕೆಯ ಬಿಡಬಲ್ಲನೆ ನಾನು ? ಇಲ್ಲ, ಇಲ್ಲ, ಸರ್ವಥಾ ಇ
ದೇಹ ಸವೆದು ಕಡ್ಡಿಯಾದರೂ ಈ ಆಸೆ ಬಿಡದು, ಜಿ
ಸೋತು ಸಣ್ಣದಾದರೂ ಈ ಆಸೆ ಅಳಿಯದು. ಕರು
ಇನ್ನಾರ ಸರಸುವುದು ಆವನಲ್ಲದೆ? ಕೂಸು ಇನ್ನಾರ ಮೊ
ವುದು ತಾಯನಲ್ಲದೆ? ಅಂತರಾತ್ಮಾ, ನಿನಗೆ ಮೊರೆಯಿಡು
ನಿನಗೆ ಶರಣು ಹೋಗುವೆ. ಪುಷ್ಪಪರಿಮಳದಂತೆ ಮ
ಎನ್ನನು ಹರಿಬಿಡು ನಿನ್ನೆಡೆಗೆ, ಸೂರ್ಯ ಕಿರಣದಂತೆಸಗಿ ಸ
ಗೊಡು ನನ್ನನು ನಿನ್ನ ಪಾದದೆಡೆಗೆ, ಮಾಯ ಮಾಡಿ ಮು
ಗೂಡಿಸಿ ಎನ್ನನು ಒಂದುಗೂಡಿಸು ನಿನ್ನಲಿ ಕರುಣಾಕರ
ಇನ್ನಾವ ಬೇರೆ ಹಾದಿ ಎನಗೆ !

ಗುರುವಿಲ್ಲದೆ ಗತಿಯಿಲ್ಲವೆನ್ನುವದು ಲೋಕ. ಇದು ನಿಜವೊ? ನಾನು ಓದಿದ್ದು ಕೇಳಿದ್ದು, ನುಡಿದದ್ದು ನಡೆದದ್ದು, ಎಲ್ಲ ಹೊಳೆಯಲ್ಲಿ ಹುಣಸೀಹಣ್ಣು ತೊಳೆದಂತಾಯಿತೆ? ಇನ್ನೇನು ಗತಿ ಎನಗೆ ದೇವಾ, ಇನ್ನಾರು ಗತಿ ಎನಗೆ ? ನಾನಂತೂ ಅನುಭವವೆ ಗುರುವೆಂದು, ಅನುಭವಕೆಯೆ ಮೊರೆಯಿಟ್ಟು, ಅನುಭವವನೆ ಅನುಸರಿಸುತ ಬಂದೆ, ಅದು ತಪ್ಪೆ ಅಂತರಾತ್ಮಾ? ಅನುಭವವೆ ಮೂರ್ತಿಗೊಂಡು ಗುರುವಾಗುವುದಿಲ್ಲವೆ ಎಮಗೆ? ಹೇಳು ಅಂತರಾತ್ಮನೇ ಹೇಳು. ನಿನ್ನ ಸತ್ಯವಾಣಿಯಿಂದ ಎನ್ನ ಸಂಶಯವ ಪರಿಹರಿಸು, ಮೈವೆತ್ತ ಅನುಭವವೆ ಗುರುದೇವನೆಂದು ಸಾರು, ಅವನನೆ ನಾನು ನಿತ್ಯ ಆರಾಧಿಸುವಂತೆ ಮಾಡು, ಸ್ವಾಮೀ.

*   *   *   *

ಗುರುದೇವಾ, ಎನ್ನ ಗುರುದೇವಾ, ಎಲ್ಲಿರುವೆ? ಹಗಲಿರುಳು ಹಾರೈಸಿ ಹಂಬಲಿಸುತಲಿರುವೆ ನಿನಗಾಗಿ, ಎಲ್ಲಿರುವೆ? ಎನ್ನ ಮನವ ಮಥಿಸಿ ಅಮೃತವ ತೆಗೆವ ಮಂದರನೆ, ಎಲ್ಲಿರುವೆ? ಎನ್ನ ಹೃದಯಗಹ್ವರದಲಿ ದೀಪದಂತೆ ಬೆಳಗುವ ದಿವ್ಯ ಶಕ್ತಿಯೆ, ಎಲ್ಲಿರುವೆ? ತೋರು ತೋರು, ಎನಗೊಮ್ಮೆ. ತನುಗುಣವ ತೊಡೆದು, ನವತರುಣಿಯ ತೇಜವ ತೋರಿ, ತತ್ವದ ದಾರಿಯ ನಡೆಸಿ, ಎನ್ನಂತರಂಗವ ತಣಿಸು, ಧನ್ಯನಮಾಡು ಎನ್ನನು, ಗುರುದೇವಾ.

ಗುರುದೇವಾ, ನಿನಗಾಗಿ ಬಳಲಿ ಬಳಲಿ ನಾನು ಬಾಯಿಬಿಡುತಿರುವಾಗ, 'ಗುರು' 'ಗುರು' ಎಂದು ಹಲವರು ಎನ್ನನು ಬೆನ್ನಟ್ಟುತಿರುವರು! ಏನು ನೋಟವಿದು! ನೀ ನೋಡಿ ನಗುತಿರ ಬಹುದಲ್ಲವೆ? ನಾನೇ ನೋಡದ ಬೆಳಕನು ಅವರಿಗಿನ್ನೇನು ತೋರಲಿ? ನಾ ಕಾಣದ ಕಣಸನು ಅವರಿಗಿನ್ನೇನುಸುರಲಿ? ತಿರುಕ ತಿರುಕನ ಬೇಡಿದಂತಾಯಿತು ಈ ನೋಟ! ಆದರೇನು, ಅವರೆನ್ನ ಬೆನ್ನ ಬಿಡರು. ಎಂತಹ ನಿರ್ಮಲ ನಂಬುಗೆ ಅವರದು? ಮೊಲೆಗೂಸ ತಾಯ ನೆಚ್ಚುವಂತೆ ಅವರು ಎನ್ನನು ನೆಚ್ಚಿಬರುತಿರುವರು, ಸ್ವಾಮೀ. ನಾ ಯೋಗ್ಯನೆ ಆ ನೆಚ್ಚಿಗೆಗೆ? ಸರ್ವಥಾ ಅಲ್ಲ. ಅವರು ನೆಚ್ಚುವದು ನನ್ನನಲ್ಲ, ಎನ್ನಲ್ಲಿರುವ ನಿನ್ನನೆ. ಅವರನು ಶಾಂತಗೊಳಿಸುವ ಭಾರ ನಿನ್ನದು, ಸ್ವಾಮೀ ನನಗಾಗಿ ಅಲ್ಲದಿದ್ದರೂ ಅವರಿಗಾಗಿ ನಿನ್ನ ಮೃತಧಾರಿಯ ತೊರೆಬಿಟ್ಟು ತೃಪ್ತಿಪಡಿಸು, ಅಂತರಾತ್ಮಾ. ನೆಚ್ಚಿದವರನು ನಿಶ್ಚಯವಾಗಿ ಕಾಯುವೆ, ಎಂಬ ಬಿರದು ನಿನ್ನದು, ನಿತ್ಯ ಸತ್ಯವ ನಿಚ್ಚಳ ದಾರೀ ತೋರು, ದುಃಖಸಮುದ್ರವ ದಾಟಿಸು, ದೇವಾ. ಇನ್ನು ಆತುರನ ಆಶೆಗೆಡಿಸಿ ಅಡವಿಯ ಸೇರಿಸಬೇಡ ಪ್ರಭುವೆ.

೩೯

ಎನ್ನಂತರಂಗದರಸಾ, ನಿನ್ನ ರಾಜ್ಯವ ಬಿಟ್ಟು
ಇನ್ನೆಷ್ಟು ದಿನ ನೀ ಹೋಗಿರಬೇಕೆನ್ನುವಿ? ನೀ
ಹೀಗೆ ಹೋಗಲು ಇಲ್ಲಿ ಎಲ್ಲ ಅರಾಜಕವಲ್ಲವೆ?
ನೀನೀಗ ಎಲ್ಲಿರುವಿಯೊ ಎತ್ತ ಇರುವಿಯೊ?
ೀಸತ್ತೆನು ನಾನು ಕಾದು ಕಾದು. ಇನ್ನೇನು ಮಾಡಲಿ?
ಕೋ, ನಿನ್ನ ಪೂಜೆಗಾಗಿ ಸದ್ವಿಚಾರಕುಸುಮಗಳನಾರಿಸಿಟ್ಟಿ
ುವೆ. ಅವುಗಳ ಮಧುರ ಪರಿಮಲವಾದರೂ ನಿನ್ನನಿತ್ತ ಬರ
ಾಡಲಿ, ಎನ್ನ ಹೃದಯ ಪುಟದಲ್ಲಿ ಉತ್ಕಟ ಪ್ರೇಮಧೂಪ
ನು ಹಾಕಿರುವೆ. ಅದು ನಿನ್ನತ್ತ ಸುಗಂಧವನು ಬೀರುವು
ಲ್ಲವೆ? ಸದಾಚಾರದ ಸುಮನಮಾಲೆಯನು ಕೈಯಲಿ ಹಿಡಿದು
ೊಂಡು ನಿಂತಿರುವೆ. ಅಯ್ಯೋ, ಇದು ಬಾಡುವುದಿಲ್ಲವೆ ನೀ
ತ ಮಾಡಿದರೆ? ಸ್ವಾಮೀ, ಇನ್ನೆಷ್ಟು ತಡೆಯಲಿ? ನಾ
ಾಡುವದು ಮಾಡಿಬಿಡುವೆ. ಇಕೊ ನನ್ನ, ಸರ್ವಸ್ವನರ್ಪಿಸಿ
ತುವೆ. ಕೊಡುವ ಕೆಲಸ ನನ್ನದು ಕೊಳ್ಳುವದು ನಿನ್ನದು
ನ್ನು ಜನ್ಮನು ನಿನ್ನ ಕೈಗೋಲನೆ ಮಾಡಿ ನಡೆಸುವ ಭಾರ
ನ್ನದಲ್ಲದೆ ನನ್ನದಲ್ಲವಯ್ಯಾ ಅಂತರಾತ್ಮಾ.

ಹುಡುಕಿ ಹುಡುಕಿ ಬೇಸತ್ತೆನು ದೇವಾ, ನಿನ್ನನ್ನು
ಏನು ನಿನ್ನ ಮಾಯೆ ಇದು! ನೀನೆಲ್ಲಿರುವಿ ಎಂಬು
ದನು ಬಲ್ಲೆ ನಾನು. ಆದರೇನು? ಕೈಗೆ ಸಿಕ್ಕ
ಲೊಲ್ಲೆಯಲ್ಲಾ! ಮಾಯಾಮೃಗದಂತೆ ಓಗೇಕೆ
ಕಾಡಿಸುವೆ ಎನ್ನನು? ಸುತ್ತು ಜಗದೊಳಗಿದ್ದು ಎನಗೆ ಕಾಣದೆ.
ಹೋಗುವಿ. ಎನ್ನ ಮೈ ರೋಮ ರೋಮಗಳೊಳಗಿದ್ದು
ಸೋಂಕದೆ ಇರುವಿ! ಯಾವ ಇಂದ್ರಜಾಲವಿದು ನಿನ್ನದು?
ಒಮ್ಮೊಮ್ಮೆ ಕಂಡರೂ ಕೈಗೆ ಬರದಿರುವಿ ನಿನ್ನನು ಅಪ್ಪಿ, ಅಪ್ಪಿ
ಎನ್ನವನನ್ನಾಗಿ ಮಾಡಿಬಿಡುವ ತವಕವೆನಗೆ, ಒಡೆಯಾ. ಎಲ್ಲೆ
ಲ್ಲಿಯೂ ಇದ್ದು ತಿಳಿ ತೆರೆಯ ಮರೆಮಾಡಿ ಎನ್ನನು ಎಷ್ಟೊಂದು
ಮೋಸಗೊಳಿಸಬೇಕೆನ್ನುವಿ; ಜೀಯಾ? ಕೈಗೆ ಬಂದ ತುತ್ತು
ಬಾಯಿಗೆ ಬಾರದಾಗಿದೆ. ಮಗ್ಗುಲಲ್ಲಿದ್ದ ಮಾತೆ ಮೊಲೆಯನು
ಣಿಸದಿದ್ದರೆ ಮಗುವಿನ ಪಾಡೇನು, ಅಂತರಾತ್ಮಾ?

೩೧ ತಹದೀ ಎನ್ನ ಜೀವ. ದೇವಾ? ಗಾಳಿಗೊಡ್ಡಿದ
ಸೊಡರಿನಂತೆ, ನೀರಗುಳ್ಳೆಯಂತೆ, ಹುಲ್ಲ
ಮೇಲಿನ ತುಂತುರದಂತೆ ಎನ್ನನು ಇರಿಸಿದೆ
ಯಲ್ಲಾ ಇಲ್ಲಿ! ಇಂತಹ ಕ್ಷುದ್ರ ಕ್ಷಣಿಕ ಜೀವಕ್ಕೆ
ತ್ತೆ ಎಂತೆಂತಹ ಆಶೆಗಳ ತಳಕನ್ನು ಹಾಕಿರುವೆ? ಸಾಗರದ
ಗಳಷ್ಟು ಅವು ಅನಂತ, ಆಕಾಶದಷ್ಟು ಅವು ವಿಶಾಲ. ಈ
ಕ್ಕ ಚಿತ್ತದಲ್ಲಿ ಅವುಗಳಿಗೆ ನೀನು ಎಡೆಗೊಟ್ಟುದೆ ಒಂದು
ರುತ್ಕಾರ. ನಾನು ಪೂರೈಸಬಲ್ಲೆನೆ ಅವುಗಳನು? ಕಡ್ಡಿ
ಂದ ಗುಡ್ಡವ ಎತ್ತಹೇಳಬೇಕೆ ಎನಗೆ? ನಿಚ್ಚಣಿಕೆ ಏರಿ
ಂಗಿಲು ಮುಟ್ಟಲಾಜ್ಞಾಪಿಸಬೇಕೆ ನೀನು? ಉಗುರಿನಿಂದ
ರವ ಕಡಿಯಲು ಬೆಸಸಬೇಕೆ. ದೇವಾ? ಇದು ಚೆಂದವೆ
ಗೆ? ಎನ್ನ ಜೀವಶಕ್ತಿ ಎತ್ತ ಈ ಆಶೆಗಳ ಪರಿಮಾಣವೆತ್ತ?
ು ಈ ಅಸಂಗತಿ! ಇದೆ ಎನ್ನ ದುಃಖದ ಬೀಜವಲ್ಲವೆ
ಮಿ! ನಿನಗೆ ಇದೊಂದು ಆಟ, ನನಗೆ ಪ್ರಾಣಸಂಕಟ. ಸಾಕು
ತು ಇನ್ನು ಈ ಚೇಷ್ಟೆ. ನಿಲ್ಲಿಸು, ಎನ್ನ ಜೀವದ ಬೇಟೆಯಾ
ವದನು, ಎನ್ನ ಆಶೆಗಳನಾದರೂ ಕಿರಿದಾಗಿರಿಸು, ಎನ್ನ
ಗಳನಾದರೂ ಹಿರಿದಾಗಿ ಮಾಡು. ಏನಾದರೂ ಅಳತೆಯಿ
ನಿನ್ನ ರಾಜ್ಯದಲಿ, ಅಂತರಾತ್ಮಾ.

ದ ದೆನ್ನಂತರಂಗದ ಆರ್ತ ನುಡಿಯು ಸ್ವಾಮೀ
ನಾದರೂ ಕೇಳು. ಈ ಎನ್ನಂತರಾಲಾಪವ
ಕೇಳದಿರೆ ಎನಗೂ ನಿನಗೂ ಇನ್ನು ಬಿಡು
ನಿಶ್ಚಯ. ಈ ದೇಹ ಜೀವಗಳಿಗೂ ಬಿಡು
ನಿಶ್ಚಯ. ಇನ್ನಿರಲಾರೆ ಹೀಗೆ, ಇನ್ನು ತಾಳಲಾರೆ
ಸ್ಥಿತಿಯನು. ಈ ಎನ್ನೆದೆಯೊಳಗಣ ಅಳಲೆ ಎನ್ನ ಹೆ
ಸಾಧನ. ನಿನ್ನ ಕಠಿನ ಹೃದಯವ ಕರಗಿಸಲು ಎನ್ನಲ್ಲಿನ್ನೊಂ
ಪಾಯವಿರುವದೆ ದೇವಾ? ಇಷ್ಟೇಕೆ ಉಪೇಕ್ಷಿಸುವೆ? ನೋ
ಎನ್ನ ಕಡೆಗೊಮ್ಮೆಯಾದರೂ ನೋಡು. ಹಗಲಿರುಳು ಕಾ
ಕೊಂಡಿರುವೆ ನಿನ್ನ ದಾರಿಯನು. ನಿನ್ನ ವಿರಹದಲ್ಲಿ ಕ್ಷಣವೊಂ
ಯುಗವಾಗಿದೆ. ಜೀವಗಳಿಂದ ತುಂಬಿದ ಜಗವೊಂದು ಅರ
ವಾಗಿದೆ. ಈ ಎನ್ನ ದೇಹಜೀವಗಳು ಹೊರಲಾರದ ಭಾರ
ಗಿದೆ, ಭವ ಒಂದು ಬಂಧನವಾಗಿದೆ. ಬಿಡಿಸಯ್ಯಾ, ನೀ ಬಂ
ಎನ್ನ ಹೃದಯ ಮಂದಿರದಲಿದ್ದು ಈ ಬಂಧನವ ಬಿಡಿಸಯ
ಈ ಬಳಲಿಕೆಯ ನೀಗಿಸಯ್ಯಾ. ಎನ್ನ ಮನವು ಅಮಲವ
ನಿನ್ನ ಮನೆಯಾಗಲಿ, ಎನ್ನ ಭಾವವು ನಿನ್ನುದಯದಿಂದ
ವಾಗಲಿ. ಎನ್ನಿಂದಸತ್ಯವ ಬಿಡಿಸು. ಸತ್ಯವ ನುಡಿಸು. ವಿ
ಕರ್ಮವ ಮಾಡಿಸು, ನಿನ್ನವರ ಕೂಡಿಸು. ಎನ್ನ ಜೀವನ
ನಿನ್ನ ಜೀವನದಂತೆ ತೇಜೋಮಯ, ಪ್ರಭಾವಪೂರ್ಣ
ನಿರ್ದುಷ್ಟ, ಸರ್ವಹಿತಕರ. ಲೀಲಾಮಯ ಹೀಗೆ ಆಗ
ದೇವಾ. ಇದನೆ ಸೆರಗೊಡ್ಡಿ ಬೇಡುವೆ. ಬಾ. ಇನ್ನು ತಡವ
ತಡೆಯಲಾರೆ. ಅಂತರಾತ್ಮಾ.

೪೩

ಈ ಹೊತ್ತು ಎನ್ನ ಹುಟ್ಟಿದ ದಿವಸ. ಈ ದೇಹವು
ಜನ್ಮ ತಾಳಿದ ದಿವಸ, ವರ್ಷಕ್ಕೊಮ್ಮೆ ನೆನಪಾ
ಗುವದು–ಅದೃಶ್ಯದಿಂದ ದೃಶ್ಯದೃಷ್ಟಿಗೆ ನಾನು
ಬಂದುದರ ನೆನಪಿದು. ಆದರೆ ಈ ನೆನಪಿ
ಂದೇನು? ವರ್ಷದಲ್ಲಿ ಪೃಥ್ವಿ ಸೂರ್ಯನ ಪ್ರದಕ್ಷಿಣೆಯು
ಮುಗಿಸಿತು. ಮಹನೀಯರು ಎಂತೆಂತಹ ಮಹತ್ಕಾರ್ಯಗಳನ್ನು
ಮಾಡಿದರು ಒಂದೇ ವರ್ಷದಲಿ. ಆದರೆ ನಾನೇನು ಮಾಡಿರುವೆ
ನೇವಾ? ನಾನೇನು ಶತಕೃತ್ಯ ಮಾಡಿರುವೆನೆಂದು ನೆನೆಸಬೇಕು
ಈ ದಿನವಾ ದೇವಾ? ತಿರುಗಿ ನೋಡಲು. ನಾನು ವರ್ಷದಲಿ
ನಡೆದ ದಾರಿ ಎಷ್ಟು? ಇಂತಹ ಪರಿ ಏಕೆ ಹುಟ್ಟಿಸಿ ಬೆಳೆಸಿದೆ
ಎನ್ನನು ಸ್ವಾಮೀ? ಇಂಥ ಪರಿ, ನನಗೆ ಈ ಹುಟ್ಟಿದ ನೆನಪೇಕೆ
ಕೊಡುವೆ? ಆನಗೆ ಆನೆಯ ಶಕ್ತಿಯಾದರೂ ಆಡಿಗೆ ಆಡಿನ
ಶಕ್ತಿ ಬೇಡವೆ? ಈ ಪರಿ ದುರ್ಬಲನನ್ನಾಗಿ ಬದುಕಿಸುವುದಕಿಂತ
ಮುಗಿಸಿ ಬಿಡು ಈ ಜೀವನಯಾತ್ರೆಯು! ನಿನ್ನ ಬಲದ
ಭಾಂಡಾರ ಬಯಲಾಯಿತೆ! ಅಥವಾ ನೀನೆ ಈಗ ಕೃಪಣ
ನಾದೆಯಾ? ನಾನೊಲ್ಲೆ ನೊಲ್ಲೆ ನೀಪರಿಯ ನೆನಪು-ಹುಟ್ಟಿನ
ದಿನ ಸಾವಿನದಿನವಾಗಲೆಂದು ಹಾರೈಸುವಂತಾಗಿದೆ ಎನಗೆ.
ಎನ್ನನು ಬದುಕಿಸಿ ಬಾಳಿಸುವ ದಿದ್ದರೆ ಗಿಡಬಳ್ಳಿಗಳು ಚಿಗಿಯು
ವಂತೆ ಎನ್ನ ಶಕ್ತಿಗಳೆಲ್ಲ ಚಿಗಿಯುವಂತೆ ಎನ್ನ ಶಕ್ತಿಗಳೆಲ್ಲ

ಚಿಗಿಯುಲಿ, ಅವ್ರುಗಳ ಹೂ ಭೂಮಿತಾಯಿಗೆರಗುವಂತೆ ಎನ್ನ
ದೇಹಮನಪ್ರಾಣಗಳೆಲ್ಲ ನಿನ್ನ ಚರಣ ಕೆರಗಲಿ: ಅವುಗಳ
ಹಣ್ಣೆಲ್ಲ ಪ್ರಾಣಿಗಳಿಗೆ ಅನ್ನವಾಗುವಂತೆ, ಎನ್ನ ಕರ್ಮಗಳೆಲ್ಲ
ವಿಶ್ವಕುಪಕಾರಕವಾಗಲಿ. ಈ ಪರಿ ಬಾಳಿಸು ದೇವಾ. ಇದನ್ನೆ
ಬೇಡುವೆ ಈ ದಿನ. ಎನ್ನ ಅಂತರಾತ್ಮಾ.

೪೪

'ದೇ ವಾ, 'ದೇವಾ,' ಎಂದು ಜಪಮಾಡಿ ಮೊರೆ ಇಟ್ಟರೆ ನೀನೊಲಿದು ಇಷ್ಟವ ಸಲಿಸುವಿ ಎಂಬರೆ ಮ್ಮವರು! ಜಪ ಮಾಡಿ ಮಾಡಿ ದಣಿದೆನೀಗ. ನಿನ್ನ ಕೃಪೆಯ ದಾರೀ ನೋಡಿ ನೋಡಿ ಕಟ್ಟಾದ
ನ್ನ ಕಣ್ಗಳು. ಬೆಳೆಯುಬಲ್ಲದೆ ಜಪದಿಂದ ಭೂಮಿ. ಅದನು
ಶಗಿ ಹಸನ ಮಾಡಿ ಬಿತ್ತಿ ಬೇಸಾಯ ಮಾಡದೆ? ಫಲ ಕೊಡ
ಬದೆ ಪೂಜಿಸಿದೊಡೆ ಗಿಡ, ಅದಕೆ ಕಟ್ಟೆ ಕಟ್ಟಿ ನೀರೆರೆದು
ಹದೆ? ನುಡಿವುದೆ ಬರಿ ಅರ್ಚನೆಯಿಂದ ವೀಣೆ, ಅದರ ತಂತೀ
ದು ತಾಳವನರಿತು ಬಾರಿಸದೆ? ಕೆಲಸ ಕೊಡುವುದೇ ಪೂಜೆ
ಂದ ಕೈದು, ಮಸೆದು ಗಂಡುಗೈಯಿಂದ ಅದನು ನಡೆಸದೆ?
ಮಾಡಿದುದೆಲ್ಲ ಹೀಗೆ ಕಟ್ಟಿಗೊಳಗು, ಸ್ವಾಮಿ. ಆ ಕಟ್ಟು
ತು ಅದರಂತೆ ಮಾಡಿದರೆ ಮಾತ್ರ ಯಶದಾಸೆ, ಇಲ್ಲದೊಡೆ
ನಿರಾಶೆ. ನಾನು ಆಲಸಿ, ಅಜ್ಞ, ಅಳಬುರುಕ. ಕೂತು
ಮಾಡಿ ಸಾಧಿಸಬೇಕೆಂದೆ ಇಹಪರವ! ಈಗ ಹೊಳೆಯಿತು
ದರ್ಥ, ನಿನ್ನ ನಿಜ ಹಾದಿ. ವಸ್ತುಧರ್ಮಗಳನು ಅದರ
ದ ತಿಳಿಯಲೆಸಗುವದೇ ನಿನ್ನ ಜಪ, ಆ ಧರ್ಮಗಳಂತೆ
ದು ಲೋಕಹಿತ ಸಾಧಿಸುವುದೆ ನಿನ್ನ ತಪ, ಅದನ್ನೆಲ್ಲ ಶ್ರೀ
ದಕ್ಕರ್ಪಿಸುವುದೆ ನಿನ್ನ ಪೂಜೆ, ಇಷ್ಟು ಮಾಡಿ ನಿಶ್ಚಿಂತ,
ಹಂಕಾರಿ, ನಿರಾಸಕ್ತ ಇರುವುದೆ ಮೋಕ್ಷ. ಅಲ್ಲವೆ
ತರಾತ್ಮಾ?

ಇನ್ನೋರ್ವ ಬಂಧುವಿನ ಆಲಾಪವೇನೆಂದರೆ—
'ಇದೇನು. ಈ ಸಂಸಾರದಲಿ ನಿಜ ಸುಖವನ
ಸುವದೀ ಜನ! ಇಲ್ಲಿ ಎಲ್ಲಿಂದ ಬರಬೇಕದು? ಹಾ.
ನನ್ನ ಜೀವನವೆಲ್ಲ ನಿರಾನಂದವಾಯಿತಲ್ಲ! ಜಡ
ವತ್, ಯಂತ್ರವತ್ ಈ ಸಂಸಾರಕರ್ಮಗಳನು ಮಾಡುತಿರುವ
ನಾನು. ಆ ಉತ್ತುಂಗ ಹಿಮಾಚಲದ ಪವಿತ್ರ ತಪೋಭೂಮಿ
ಯತ್ತ ಇಲ್ಲವೆ ಸತ್ಪುರುಷರ ಸಂಗದತ್ತ ಎಸಳುವದೀಮನ.
—ಆತ್ಮಬಂಧುವೇ ಇಷ್ಟೊಂದು ನಿರಾಸೆಯೇಕೆ? ಸಂಸಾರವನು
ಕುರಿತು ಇಷ್ಟೊಂದು ಹೇಯ ಭಾವವೇಕೆ? ಅದನಾವರೂ
ಅವನೇ ಮಾಡಿಲ್ಲವೆ? ಅದೇನು ವಿಷಕೂಪವೆ? ಹಾಗಿದ್ದರೂ
ಅದನು ಅಮೃತಮಯ ಮಾಡುವ ಮಾಟಗಾರರಿಗೆ ಆತ್ಮನಲ್ಲಿ
ಲ್ಲವೆ? ನೀನು ಹುಡುಕುತಲಿರುವುದು ಆತ್ಮಾನಂದ. ಅದು
ಸಂಸಾರದಲ್ಲಿಯೂ ಇಲ್ಲ. ಹಿಮಗಿರಿಯಡಿಯಲ್ಲಿಯೂ ಇಲ್ಲ,
ಸತ್ಪುರುಷರ ಪಾದೆಡೆಗೂ ಇಲ್ಲ. ಅದು ಆತ್ಮನಲ್ಲಿಯೆ ಇದೆ.
ನಿರ್ಮಲ ಚಿತ್ತದ ಕೊನೆಯ ಮೊನೆಯ ಧಾರೆಯದು. ಆತ್ಮನು
ಆನಂದಮಯನು, ಆನಂದ ಸ್ವರೂಪನು. ಆತ್ಮವೆ ಆನಂದ
ಆನಂದವೆ ಆತ್ಮ. ನಿರಾಲಂಬ ಸ್ವಯಂಭೂ ಸುಖವೆ ಆನಂದ.
ಈ ಜ್ಞಾನಾನುಭವದಿಂದಲೆ ಆನಂದ ಪ್ರಾಪ್ತಿ. ಹೃದಯಾಂತರ
ದಲ್ಲಿ ಈ ಜ್ಞಾನದ ಸೆಲೆಯೊಡೆಯುವನಕ ಎಲ್ಲಿ ಹೋದರೇನು
ಬಂದರೇನು, ಅಮೃತದ ಆಶೆಯೇಕೆ? ನಿಷ್ಕಾಮ ಸಮರ್ಪಣ
ಭಾವನೆ ಹೃದಯ ಕವಾಟದ ಕೈ. ಬಂಧುವೇ, ಅಲ್ಲಿ

ಇಲ್ಲಿ, ಹೋಗಬೇಕೆನ್ನುವ ಆತುರವಿಲ್ಲದೆ ಇದ್ದಲ್ಲಿ, ಇದ್ದ ಹಾಗೆ ಈ ಸಾಧನವನಾರಂಭಿಸುವ, ಹೇ ಅಂತರಾತ್ಮಾ, ಈ ಸಾಧನ ಮಾಡಲು ನಮಗೆ ಬಲಶೀಲಗಳನು ದಯಪಾಲಿಸು.

ಆಹಾ ! ಆಕಾಶದ ಈ ತಾರಕೆಗಳು, ಈ ಅಗಣಿತ ತಾರಾಗಣ–ಕರೆಯ ಕಾಳರಾತ್ರಿಯಲಿ ಒಂದೊಂದೆ ಒಂದೊಂದೆ ಮೂಡಿ ನಿಶಾದೇವಿಯ ಮುಕುಟ ಮಣಿಗಳಂತೆ ನಭಮಂಡಲವ ತುಂಬಿ ಬಿಡುತಿರುವವು. ತಮ್ಮ ತಮ್ಮ ಪರಿ ತೊಳಗುತ್ತ ಬೆಳಗುತ್ತ ಅನಂತ ಪಥವಲ್ಲಿ ಸಾಗಿರುವವು. ಅವುಗಳ ಮೂಡು ಮುಳುಗುಗಳನು ನಾನು ಪ್ರತಿನಿತ್ಯ ನೋಡುತ್ತಿರುವೆ. ಆದರೇನು ಅವುಗಳ, ಹುಟ್ಟುಸಾವುಗಳನರಿತವರುಂಟೆ ? ಅವು ಕಾಣುವುದೇಕೆ ಅಡಗುವುದೇಕೆ ಯಾರು ಬಲ್ಲರು ? ಅವುಗಳ ಮಿನುಗಿನಿಂದೇನು ಕತ್ತಲೆ ಹರಿಯುವುದೆ ? ಇಲ್ಲ. ಪಥಿಕರಿಗೆ ದಾರಿ ಕಾಣುವುವೆ ? ಇಲ್ಲ, ಇಲ್ಲ. ಒಬ್ಬ ಬಡವನ ಮನೆ ಯಾದರೂ ಬೆಳಗುವುದೆ ? ಸರ್ವಥಾ ಇಲ್ಲ. ಆದರೂ ವಿಶ್ವ ದೇವಿ ಘನನೀಲ ಪಾತ್ರೆಯಲಿ ಈ ಮಲ್ಲಿಗೆಯ ಹೂ ತುಂಬಿ ತುಂಬಿ ಶಾಂತ ನಿಶಾಸಮಯದಲ್ಲಿ ನಿನ್ನ ಗೂಢ ಪಾದಗಳ ಮೇಲೆ ನಿಚ್ಚ ನಿಚ್ಚ ಎರಚುತಿರುವಳು. ಆ ಚಿಕ್ಕಿಗಳಲಿ ನನ್ನನೊಂದು ಚಿಕ್ಕಿಯ ಮಾಡು ದೇವಾ, ಆ ಮಲ್ಲಿಗೆಯ ರಾಶಿಯಲಿ ಎನ್ನನೊಂದು ಅಡವಿಮಲ್ಲಿಗೆ ಮಾಡಿ ಇರಿಸು ಸ್ವಾಮೀ. ಎನ್ನ ಹುಟ್ಟು ನಾನರಿಯೆ, ಎನ್ನ ಸಾವು ನಾನರಿಯೆ. ಯಾಕೆಂದು ಹೋಗುವೆ, ಏನೆಂದು ಬರುವೆ. ನಾನರಿಯೆ ಬಂದುದೆಲ್ಲಿಂದ ಸಾಗುವುದೆಲ್ಲಿಗೆ ನಾನರಿಯೆ, ಇಲ್ಲಿರುವನಕ ಮಿಣುಕಿ ಮಿಣುಕಿ ಒಮ್ಮೆಯಾದರೂ ನಿನ್ನಡಿಯ ನೋಡಿದರೆ

ದೇ ಎನ್ನ ಜೀವನ ಸಾರ್ಥಕ್ಯವು, ಜೀವದೊಡೆಯಾ. ಇದಕಾ
ಯೆ ಮಿಡುಕುವೆ, ಇದನೆ ಬೇಡುವೆ, ಇದನೆ ಹಾಡುವೆ, ಕಾಡಿ
ಡಿ ನಿನ್ನನು ಇದನೆ ಕೇಳುವೆ ಅಂತರಾತ್ಮ, ಕೊಡು, ಕಡೆ
ಯಿಸು.

೪೭

ಆಹಾ ! ಅತ್ತ ನಭಾಂಗಣದಲ್ಲಿ ತಾರಾವಲಿ ಇತ್ತ ಧರಾಂಗಣದಲ್ಲಿ ದೀಪಾವಲಿ. ಏನಿದು ದೀಪೋತ್ಸವ ದೇವಾ, ನಿನ್ನ ದಿವ್ಯಾಂಗಣವೆಲ್ಲ ಭಕ್ತಿ ದೀಪಗಳ ಮಾಲೆಗಳಿಂದ ಮಿಂಚುತಲಿದೆ. ಜಾಡದಲ್ಲಿ ಚೇತನದ ಮಂದ ಪ್ರತಿಬಿಂಬ ಕಾಣುವಂತೆ ಮುಗಿಲಲಿರುವ ನಕ್ಷತ್ರಾವಲಿಯ ಛಾಯೆ ಇಲ್ಲಿ ಭೂಮಿಯಲಿ ತೋರುತಿದೆ. ಇಕೋ ಈ ಹೊಳೆಯಲಿ ಅನಂತ ದೀಪಗಳು ತೇಲುತ್ತ ಸಾಗುತಿವೆ. ಅವು ಹೋಗಿ ನಿನ್ನ ಪಾದಗಳನು ಮುಟ್ಟುವವು ಎಂದು ಭಾವಿಕರ ಶ್ರದ್ಧೆ ! ಸುಕುಮಾರ ಸುಂದರಿಯರ ಭಯಭಕ್ತಿ, ಅವರ ಸುಕೋಮಲ ಭಾವವೈಭವ, ಅವರ ಮೃದುಹೃದಯಾಂತರದಲಿರುವ ಅನಂತ ಅಸ್ಫುಟ ಆಕಾಂಕ್ಷೆಗಳು, ಅವರು ಹಚ್ಚಿ ತೇಲಿಸುವ ದೀಪಗಳೊಡನೆ ನಿನ್ನ ಚರಣಗಳೆಡೆಗೆ ಬರುತಿವೆ, ದೇವಾ, ಈ ವಿಶಾಲ ಜೀವನಪ್ರವಾಹದ ದಂಡೆಯಲಿ ನಾನೊಬ್ಬ ಮಾತ್ರ ಸುಮ್ಮನೆ ಸೋಮಾರಿಯಾಗಿ ಎಲ್ಲವನು ನೋಡುತ ಕುಳಿತಿರುವೆ ಚಿತ್ರದಂತೆ, ಏನು ಮಾಡಲಿ ಸ್ವಾಮೀ ? ಇನ್ನು ಸಾಕು ಈ ಆಲಸ್ಯ. ಎನ್ನ ತಂಗಿಯರು ಕಲಿಸಿದ ಪಾಠವನು ತೀಡುವೆ. ಈ ಕಾರ್ತಿಕೋತ್ಸವದಲ್ಲಿ ನಾನೂ ನನ್ನ ಹೃದಯ ದೀಪವನು ತೇಲಿ ಬಿಡುವೆ, ನಿನ್ನ ಚರಣಕೆ ಸಮರ್ಪಿಸುವೆ. ಅದನು ಸ್ವೀಕರಿಸಿ ಧನ್ಯಗೊಳಿಸು ಜೀಯಾ, ಅಂತರಾತ್ಮಾ.



ಥ ಪ್ರಶಾಂತ ನಟ್ಟಿರುಳಿದು ! ಶಾಂತಿ, ಸುತ್ತಲು ಸಾವಿನಂತಹ ಶಾಂತಿ; ಶಾಂತಿ, ಎಲ್ಲೆಲ್ಲಿಯೂ ಮರಣಮಯ ಶಾಂತಿ. ಚಂದ್ರಮನ ತಂಗೈಗಳು ಭೂದೇವಿಯನು ಚಪ್ಪರಿಸಿ ಮಲಗಿಸಿ ಬಿಟ್ಟಿರು ರವು. ಗಾಳಿ ಕೂಡ ಸುಳಿಯಲರಿಯದೆ ತಟ್ಟನೆ ನಿಂತುಬಿಟ್ಟಂತೆ ತೋರುವದು. ಎಲ್ಲಿಯೊ ಒಂದು ನಾಯಿಯ ಬೊಗಳು ಇನ್ನೆಲ್ಲಿಯೊ ಒಂದ ಹಾಲಕ್ಕಿಯ ಕಿಲಬಿಲ ಕೇಳು ತಿರುವವು. ತೆರೆ ಇಲ್ಲದ ಸ್ತಬ್ಧ ಸರೋವರದಲ್ಲಿ ಚಲ್ಲಿದ ಒಂದು ಸಣ್ಣ ಹರಳಿನಂತೆ ಅವು ಈ ಶಾಂತಿಯ ಗಭೀರತೆಯನೆ ಹೆಚ್ಚಿ ಸುತಿರುವವು. ಆದರೇನು, ಪ್ರಾಣನಾಥಾ, ಈ ಎನ್ನ ಹೃದ ಯಾಂಗಣದಲ್ಲಿ ಇದೆಂತಹ ಅಲ್ಲೋಲ ಕಲ್ಲೋಲ ! ಈ ಹೊರ ಣ ಶಾಂತಿಯು, ಮೈಗೆ ತೊಡೆದಾತಿರುವ ಈ ಇರುಳಿನ ಶಾಂತಿಯು ಎನ್ನೊಳಗೆ ಹೊಗಲರಿಯದೆ ? ಶಾಂತಿದೇವಿ ಎನ್ನ ನದ ಹೊಸತಿಲೊಳಗೆ ಕಾಲಿಡಲಾರಳೆ ? ಎನ್ನ ಈ ಚಿಕ್ಕ ಸೋ ಮಂದಿರದಲ್ಲಿ ಇದಾವ ಪರಿಯ ಕುದಿ, ಇದಾವ ತೆರದ ರಳತೆ, ಇದಾವ ಬಗೆಯ ತಳಮಳ ? ಇದೇನು, ನಿನ್ನ ವಿರಹ ಪ್ತ ಲತೆಯೊ ಅತೃಪ್ತ ಆಕಾಂಕ್ಷೆಗಳ ಅಸ್ವಸ್ಥತೆಯೊ ಪ್ರಸುಪ್ತ ಂಕಲ್ಪಗಳ ಸ್ವಪ್ನ ಭಾವವೊ ಸಾಯಲಾರದ ವಾಸನಾಜಾಲದ ಾಂಡವವೊ. ಏನೆಂದು ತಿಳಿಯಲಿ ದೇವಾ ? ಇದನಾರು ಶಾಂತ

ಗೊಳಿಸಬಲ್ಲರು ನೀನಲ್ಲದೆ, ಪ್ರಭುವೆ ? ಇನ್ನಾರು ಬಲ್ಲ ನೀನಲ್ಲದೆ, ಈ ಹೃದಯದ ಗೂಢ ಪ್ರಶ್ನೆಗಳನು ಅದರ ಅಸ್ಥಿ ತೆಯ ಬೀಜವನು, ಅದಕಾದ ಅಸಾಧ್ಯ ರೋಗದ ಔಷಧವನು ಅಂತರಾತ್ಮಾ, ಇನ್ನು ನೀನೇ ಗತಿ. ಹೃದಯದೊಡೆಯಾ, ಕೈಬಿಟ್ಟರೆ ನಾ ಮತ್ತಿನ್ನಾರನಾಶ್ರಯಿಸಲಿ ?

ಆಧಿ ವ್ಯಾಧಿಗಳು, ಸಂಕಟ ಸಂತಾಪಗಳು, ದುಃಖ
ಕಷ್ಟಗಳು ಎನಗೆ ಬೇಡವೆಂದು ನಾನು ನಿನ್ನನೆಂದೂ
ಪ್ರಾರ್ಥಿಸಲಾರೆ, ದೇವಾ, ಇವು ಇಲ್ಲದ ನಿಃಸಾರ
ಜೀವನವ ನಾನೊಲ್ಲೆ ನೊಲ್ಲೆನು, ಪ್ರಭುವೇ.
ದರೆ ನಾನು ಬೇಡವುದೊಂದೆ, ನೀನು ಇವುಗಳಲಿ ಇರು,
ಂಬುದನು. ಬರಲಿ, ಇವುಗಳೆಲ್ಲ ಬರಲಿ, ನನ್ನ ಮೇಲೆ ಅಡ್ಡ
ಳೆಯಂತೆ ಕರೆಯಲಿ, ನನ್ನನು ಜೇನಿನಂತೆ ಮುತ್ತಲಿ. ನೀ
ಾತ್ರ ಎನಗೆ ನಿನ್ನ ಮುಖವ ಸಂತತ ತೋರುತಿರು, ಜೀವದೊ
ಯಾ. ಅಂದರೆ ಅದನೆಲ್ಲವನು ನಸುನಗುತ ಸಹಿಸುವೆ, ಸ್ಮಿತ
ಾಸ್ಯ ಮಾಡುತ ದಾರಿಯ ನಡೆವೆ, ಸಂಸಾರ ಭಾರವನು ಸಮು
ಾವದಿ ತೂಗಿ ಒಗೆಯುವೆ. ತಾಯಿ ಕೊಡುವ ಗುಟ್ಟಿಯಂತೆ,
ದ್ಯ ಕೊಡುವ ಕಹಿ ಕಷಾಯದಂತೆ ಇದನೆಲ್ಲ ಸೇವಿಸಿ, ಅರ
ಸಿ ಅಮೃತನಾಗುವೆ ನಾನು, ದೇವದೇವಾ. ರೋಗದ ಘನ
ೋವಿನಲಿ, ದುಷ್ಟರೆಸಗುವ ಪೀಡೆಯಲಿ, ಸೆರೆಮನೆಗಳ ಸಂತಾ
ದಲಿ, ಘೋರ ರಣರಂಗದ ಗಾಯಗಳಲಿ, ನಿಸರ್ಗದ ಆಘಾತ
ಪಘಾತಗಳಲಿ, ವಿರಹ ವ್ಯಥೆಗಳಲಿ ನಿನ್ನ ದಿವ್ಯ ಸ್ಪರ್ಶವಾಗು
ರಲಿ ಎನಗೆ ದೇವಾ. ನಿನ್ನ ಕಲ್ಯಾಣತಮ ರೂಪವ ಕಾಣುವ
ಣ್ಣನೆಲ್ಲೆಲ್ಲಿಯೂ ಕೊಟ್ಟು ಧನ್ಯಗೊಳಿಸು ಎನ್ನನು, ಅಂತರಾತ್ಮ

ಇದೆಂತಹ ಮಣಿಹವ ನೇಮಿಸಿದೆ ದೇವಾ ? ಮ
ಮನಾಳುವುದು ನನ್ನಳವೆ ? ಯಾರೂ ಇಲ್ಲ. ಈ
ಬದಿಗೆ ಯಾರೂ ಇಲ್ಲ, ಎನ್ನ ಸಹಾಯಕೆ ಯಾರ
ಇಲ್ಲ, ನಾನೇ ನಾನು ಎನ್ನ ವಿಚಾರಗಳ ವಿಚಾ
ಗಳು, ಎನ್ನ ಭಾವನೆಗಳೆ ಭಾವನೆಗಳು. ಈ ಎನ್ನ ಚಿಕ್ಕ ಹೃ
ಯಪಾತ್ರದಲಿ ಇದೆಂತಹ ಪ್ರಚಂಡ ಭಾವಸಮುದ್ರವು, ಇದೆ
ತಹ ವಿಶಾಲ ವಿಚಾರಸಾಗರವು ! ಸ್ವಾಮಿ ಇವುಗಳಲಿ ಒಂದ
ಒಂಟಿಹುಟ್ಟಿನ ಹರಗೋಲಿನಂತೆ ಎನ್ನ ಪಾಡು. ಭಾವನೆಗ
ಈ ಬಿರುಗಾಳಿ, ಬಗೆಗಳ ಈ ಉಕ್ಕು. ಅಂತರದಲ್ಲಿಯ ಈ ವಿ
ಳಿತ ಇವುಗಳಲಿ ಅಲೆಯಲೆದಾಡಿ, ನೋಡಿ, ನೊಂದು ಬೆಂದು
ಬೇಸತ್ತೆನಯ್ಯಾ. ಇವುಗಳನು ಆಳಿ ಉಳಿಯುವ ಆಶೆ ಇನ್ನೆ
ಯದಯ್ಯಾ. ಹೀಗೆ ಎತ್ತ ಒಗೆದತ್ತ ಹೋಗಿ ಮಿಡುಮಿಡು
ಮಡಿಯುವಂತಾಯಿತು ಎನ್ನ ಜೀವನವು. ದೇವಾ ಎನ್ನ ಎ
ಕನಸುಗಳೆಲ್ಲ ಮನಸಿನಲ್ಲಿಯೆ ಮಣ್ಣಾದುವು. ಎನ್ನ ಇಚ್ಛೆಗಳೆ
ಇದ್ದಲ್ಲಿಯೆ ಇಂಗಿದವು. ಇನ್ನಾರಿಗೆ ಮೊರೆ ಇಡಲಿ. ಅಂ
ರಾತ್ಮಾ ? ನೀನೆ ಎನ್ನ ಧ್ರುವ ಚಿಕ್ಕೆಯಲ್ಲವೆ ? ಈ ಕಗ್ಗತ್ತ
ಯಲಿ ನೀನೆ ಎನ್ನ ಕೈದೀಪ, ಎನ್ನ ಆಶೆಯ ಕಿರಣ ಎನ್ನ ಮ
ಜೀವಣಿ, ದೇವಾ. ದೇವಾ, ಕೈ ಹಿಡಿದು ಕಾಯಯ್ಯಾ ಹೃ
ಯದ ಈ ಹಗೆತನವನು ಹೋಗಲಾಡಿಸಯ್ಯಾ. ಈ ಹುಮ್ಮಸ
ಕುದುರೆಯನು ಏರುವ ಹದನವನು ಕಲಿಸಯ್ಯಾ, ಎನ್ನ ಹುಚ್ಚು
ಮನವನಾಳಿ ಬಾಳುವ ಆನಂದವನು ಕರುಣಿಸಯ್ಯಾ ಅಂ
ರಾತ್ಮಾ.

ಆಹಾ! ಎಂತಹ ಫಲವತ್ತಾದ ಭೂಮಿ ಇದು! ಕಾಳು ಕಡಿ, ಹಣ್ಣು ಹಂಪಲು, ಹೂ ಬಳ್ಳಿ ಇವುಗಳನ್ನು ಬೆಳೆಯಿಸಿ, ಕೊಟ್ಟು ಮಾನವ ಜೀವನವನ್ನು ಪ್ರಾಣಪರಾಕ್ರಮಗಳಿಂದ ಸಫಲಗೊಳಿಸುವುದು ಈ ಭೂಮಿ! ಗಾಳಿ ತಂಗಾಳಿ, ಈ ಬೆಳಕು ತೇಜದಾಯಕ
ಳಕು, ಈ ವಿಶಾಲ ದೇಶಕಾಲಗಳು ಮಾನವನ ಆಟ ಅಲ್ಹಾದ,
ೂಟ ಕೂಟಗಳಿಗೆಡೆಗೊಟ್ಟು ಅವನನು ರಮಿಸುವವು.
ೂಗರ್ಭ ತಾನು ಖನಿಜಗಳನಿತ್ತು ಮಾನವನ ಹಿತವ ಸಾಧಿಸ
ೇಕೆನ್ನುವುದು. ಆದರೇನು? ಹೇ ಮಾನವಾ, ಹೇ ಮೂಢ
ಾನವಾ, ಹೇ ಮೂರ್ಖ ಮಾನವಾ ನಿನ್ನ ಗತಿ ಏನಾಗಿದೆ?
ೂಮಿಯ ಮೇಲಿನ, ಕೆಳಗಿನ. ಒಳಗಿನ ಈ ಧನ ಈ ಸಮೃದ್ಧಿ
ವೆಲ್ಲ ನಿನ್ನ ಕುಲದ ದುಃಖಕೆ ಮಾತ್ರ ಕಾರಣವಾಗಿಲ್ಲವೆ?
ನಿದು ನಿನ್ನ ಸಮಾಜ, ಏನು ಅದರ ಈ ರಚನೆ? ಎಷ್ಟು
ನ್ಯಾಯ, ಎಂತಹ ಅಸಮಾನತೆ, ಯಾವ ಮತ್ಸರ. ಎಂತಹ
ಬ್ಬಾಳಿಕೆ ನಿನ್ನ ಸಮಾಜದಲಿ? ನನ್ನದು. ನನ್ನದು ಎಂದು
ತಿಯೊಬ್ಬನು ಬಡಕೊಂಡು, ಎಲ್ಲವನು ಬಳಕೊಂಡು
ಲಿಯ ಬೇಕೆನ್ನುವನು! ಏನಿದು ಬಲಿಯುವ ಹವ್ಯಾಸ, ಎಂತಹ
ಸುರೀ ಆಸೆ ಇದು? ಇದರಿಂದಿನ್ನೆಂದು ಬಿಡಿಸುವಿರಿ ದೇವ
ೇವಾ, ಅಂತರಾತ್ಮಾ, ಈ ಮರುಳ ಮಾನವರನು? ಇನ್ನೆಂದು
ಜ ಬಂಧುಭಾವವನು ನೆಲೆಗೊಳಿಸುವಿ ಅವರಲಿ?

ಎಲ್ಲವೂ ಇದ್ದು ಬುದ್ಧಿಯೊಂದಿಲ್ಲದೆ ಹಾಳಾಯ್ತು ಈ ಮಾನವ ವಂಶ! ಇಷ್ಟೊಂದು ತಿಳಿಯಬಾರದೆ? ಈ ಭೂಮಿ ಎಲ್ಲರದು, ಈ ಗಾಳಿ ಎಲ್ಲರದು. ಈ ಮುಗಿಲು ಎಲ್ಲರದು, ಈ ಬೆಳಕು ಎಲ್ಲರದು ಎಂಬ ಭಾವ ಮೂಡಬಾರದೆ ಎಲ್ಲರಲಿ? ಇದು ನನ್ನದು, ಅದು ನನ್ನದು ಎಂದು ಎಲ್ಲ ದಡ್ಡರು ಜಾಣರು ಕೂಡಿ ಹೊಡೆದಾಡಬೇಕೆ? ಜಾಣರ ಈ ಹೊಡೆದಾಟವ ನೋಡಿ ಹುಚ್ಚರು ಸಹ ನಗವರು! ದೇವ ಕೊಟ್ಟ ಸುಖ ಸಾಧನಗಳನ್ನು ಸರಿಯಾಗಿ ಹಂಚದೆ ಹೊಡೆದಾಡಿ ಸಾಯುವರಲ್ಲಾ ಈ ಮಾನವರು, ಎಂಬುದು ಮೂಲೋಕದಲಿ ನಗೆಗೀಡಾಗುತಿದೆ! ಇನ್ನಾದರು ಬುದ್ಧಿ ಬಾರದೆ, ಇನ್ನಾದರು ಬೆಳಕು ಹೊಳೆಯದೆ? ಇನ್ನಾದರು ನೀನು ಇವರನು ಈ ಪಂಕದೊಳಗಿಂದೆತ್ತಬಾರದೆ ಅಂತರಾತ್ಮಾ? ಇನ್ನೆಷ್ಟು ಪರೀಕ್ಷಿಸುವಿ ಈ ಬಾಲಬುದ್ಧಿಯವರನು?

ಎಂದೋ ಈ ಕತ್ತಲೆ ಹರಿದು ಬೆಳಗಾಗುವದು? ಎಂದೋ ಈ ಸ್ವಾರ್ಥ ಹೋಗಿ ಪರಾರ್ಥ ನೆಲೆಗೊಳ್ಳುವದು! ಎಂದೋ ಈ ಮೂಢತನ ಹೋಗಿ ಜಾಣತನ ಬರುವದು ಈ ಮನುಜ ವಂಶದಲಿ!
ಂದೋ ನೀತಿ, ಸತ್ಯ, ಬಾಂಧವ್ಯಗಳ ತವರಗಿರಾಗುವದು ಈ
ರುಚ್ಚು ಸಮಾಜ! ಈ ಭೂಮಿಸೀಮೆ, ಈ ಧನಕನಕ.
ಈ ಕಣ್ಣಿಗೆ ಕಾಣುವ ಸಿರಿಸಂಪತ್ತು ಇದೆಲ್ಲ ಸಮಾಜದ್ದು, ತನ್ನ
ಶಾರೀರಿಕ, ಮಾನಸಿಕ, ನೈತಿಕ ಶಕ್ತಿ ಸಾಮರ್ಥ್ಯಗಳನ್ನೆಲ್ಲ ವಿಕಾಸ
ಗೊಳಿಸಿ, ಬಲಿಸಿ ತಾನು ಈ ಸಮಾಜದೇವತೆಗೆ ಅರ್ಪಿಸಬೇಕು.
ಂಬ ವೃತ್ತಿ ಪ್ರತಿ ಮಾನವನ ಮನೋಮಂಡಲದಲಿ ಮೂಡಿ
ರುನೆಮಾಡುವನಕ ಅಸಾಧ್ಯ, ಸಮಾಜ ಸುಸಂಘಟನೆ ಅಸಾಧ್ಯ,
ರೇವಾ. ಹೀಗೆಂದು ಮಾಡಬೇಕೆನ್ನುವಿ? ಹೀಗೆಂದು ಮಾಡಿ
ಮಾನವ ಕುಲವನು ಸಲಹಬೇಕೆನ್ನುವಿ, ಅಂತರಾತ್ಮಾ?

ನಾ ನಿನ್ನ ನಲ್ಮೆಯ ಹಸುಗೂಸಲ್ಲವೆ ದೇವಾ. ನಿನ್ನ ಪ್ರಿಯ ಪುತ್ರನಲ್ಲವೆ ದೊರೆಯೆ? ನಾ ಹುಟ್ಟಿ ಬೆಳೆದಿರುವೆ ನಿನ್ನ ನಿಸರ್ಗ ದೇವತೆಯ ಮಡಲಲ್ಲಿ: ಆಡಿರುವೆ ಆಕೆಯ ತೋಳ ತೊಟ್ಟಿಲಲ್ಲಿ. ವನದ ವೃಕ್ಷ ಬೆಳಕನರಸಿ ಅದರತ್ತ ತನ್ನ ಚಿಗುರನು ಚಾಚುವಂತೆ, ಹೂಗಳ ಮಧುವಿನತ್ತ ಜೇನು ಝೇಂಕರಿಸಿ ಸಾಗುವಂತೆ, ನನ್ನ ಇಂದ್ರಿಯ ಮನಗಳೆಲ್ಲವು ಎಳಸುವವು ನೀ ಸೃಜಿಸಿದ ರಮಣೀಯ ವಸ್ತುಗಳೆಡೆಗೆ, ಹೇ ವಿಶ್ವರೂಪಾ. ಆದರೇನು, ಅಕೊ ಬಂದರೀ ಶುಷ್ಕ ನಿಗ್ರಹಿಗಳು—ಇದು ಘಾತಕವು ಅದು ಘಾತಕವು ಸವಿಯನು ಉಣ್ಣಬೇಡಿ, ಸುಂದರವಾದುದನ್ನು ಸಂದರ್ಶಿಸಬೇಡಿ, ಇಂಪಾದುದನು ಕೇಳಬೇಡಿ, ಮೃದುವಾದುದನು ಸೋಂಕಬೇಡಿ, ಮಧುರವನು ಸೇವಿಸಬೇಡಿ ಎಂದು ಉಸುರುತಿರುವರವರು. ಎನ್ನ ಮನವು ಅವುಗಳಲಿ ಸಿಲುಕಿ ಬಿದ್ದು ನಿನ್ನತ್ತ ಸಾಗಲಿಕ್ಕಿಲ್ಲೆಂಬ ಭಯ ಅವರಿಗೆ! ವೃಕ್ಷದಡಿಗೆ ಇದ್ದು, ಭಿಕ್ಷೆಯ ಬೇಡಿ, ರುಕ್ಷವನು ತಿಂದು, ಶಿಕ್ಷೆಯ ಭೋಗಿಸುತಿರುವುದೆ ನಿನ್ನ ಹಾದಿ ಎನ್ನುತಿರುವರವರು. ದೇವಾ, ದೇವಾ, ಇದೆಯೊ ನಿನ್ನ ಬಳಿಗೆ ಬರುವ ಮಾರ್ಗ? ಇದಕ್ಕಾಗಿ, ಈ ಪರಿಕಾಲ್ಕೆಳಗೆ ಮೆಟ್ಟುವುದಕ್ಕಾಗಿ ಹುಟ್ಟಿಸಿದೆಯಾ ಎನ್ನ ಇಂದ್ರಿಯಗಳನ್ನು? ಇದಕಾಗಿ, ಹೀಗೆ ಪೂರ್ಣ ತ್ಯಜಿಸುವದಕಾಗಿ ಈ ವಿವಿಧ ವಿಶ್ವವ ನಿರ್ಮಿಸಿರುವಿಯಾ? ಇದು ನೀ ಜೀವಕ್ಕೆ ಒಡ್ಡಿದ ಬಲೆ ಎಂದು ನಂಬಲೆ ನಾನು? ಅಂತರಾತ್ಮಾ, ಈ ಒಗಟನ್ನು ನೀನಲ್ಲದೆ ಇನ್ನಾರು ಬಿಡಿಸಬಲ್ಲರು?

ದೇವಾ, ನಿನ್ನನು ಹುಡುಕಿ ಹುಡುಕಿ ಬೆಸತ್ತೆ. ನಿನ್ನ
ದಾರೀ ಕಾದು ಕಾದು ಸೋತೆ. ರಾಮ ರಾಮ
ನೆಂದು ಜಪಿಸಲು ರಾಮಾಯಣದ ಮಾನವೀ
ರಾಮನೆದುರಾದನೆ ಹೊರತು ಸರ್ವ ಕರ್ತ ಸರ್ವ
ಭರ್ತ ಸರ್ವವ್ಯಾಪಿ ನೀನು ಎನಗೆ ಕಾಣಲಿಲ್ಲ. ಕೃಷ್ಣ ಕೃಷ್ಣ
ನೆಂದು ಧ್ಯಾನಿಸಲು ಗೋಪೀವಲ್ಲಭ ಚಕ್ರಧರ ಪಾರ್ಥಸಾರಥಿಯು
ಮುಂದೆ ಬಂದು ನಿಂತನೆ ಹೊರತು ಪ್ರತ್ಯಕ್ಷ ವಿಶ್ವಂಭರನು
ತೋರಲಿಲ್ಲ. ಶಿವಶಿವನೆಂದರೆ ಸ್ಮಶಾನವಾಸಿ ರುಂಡಮಾಲಾ
ಧರ ರುದ್ರನು ಗೋಚರನಾದನೆ ಹೊರತು ವಿಶ್ವಲೀಲಾವಿಹಾರಿ
ಶಕ್ತಿಯು ಕಣ್ಣಿಗೆ ಬೀಳಲಿಲ್ಲ. ನಿನ್ನನು ಕಂಡೆವು, ನೋಡಿ
ದೆವು, ಮಾತನಾಡಿದೆವು, ಒಡನಾಡಿದೆವು, ಎಂದು ಹೇಳುವದು
ಎಷ್ಟೋ ಜನ! ನಿಜವೆ ಇದು, ಗುಣಾತೀತ ಪ್ರಭುವೇ? ಅಥವಾ
ತಮ್ಮ ಶುದ್ಧೀಕೃತ, ಇಲ್ಲವೆ ಧ್ಯೇಯೀಭೂತ, ಇಲ್ಲವೆ ಕಲ್ಪಿತಸ್ವ
ಆತ್ಮನನೆ ನೋಡಿ ತಾವು ಧನ್ಯರೆಂದು ಭಾವಿಸಿದರೋ, ದೇವಾ?
ಯಾವ ಮೋಹದ ಮುಸುಕನ್ನು ಹಾಕಿ ಅವರನ್ನು ಮೋಸ
ಗೊಳಿಸಿದೆ ಹೇಳಬಾರದೆ, ಅಂತರಾತ್ಮಾ?

೫೬

ದೇವಾ, ದೇವಾ, ನೀನೆಲ್ಲಿರುವಿ? ನಿನ್ನ ದರ್ಶನವೆಂದಾಗುವುದೆನಗೆ? ನಾನು ಬಲ್ಲೆನು ಬಲ್ಲೆನು ಆ ರಾಮಕೃಷ್ಣರನು, ಆ ವಿಷ್ಣುಶಿವರನು. ಅವರೆಲ್ಲ ನಮ್ಮ ಕಲ್ಪನೆಯ ಗೊಂಬೆಗಳು. ಎಂತಹ ಹುಚ್ಚರು ನಾವು! ನಿನಗೆ ಕೈಕಾಲು ಪಂಚೇಂದ್ರಿಯಗಳನು ಕೊಟ್ಟು, ನಿನ್ನಲ್ಲಿ ನಮ್ಮ ಗುಣಗಳನಾರೋಪಿಸಿ ನಾವು ನಿನ್ನನು ಮಾನವನನು ಮಾಡಿಬಿಟ್ಟಿರುವೆವು! ಪುರಾಣರಾಶಿಗಳನೆ ಬರೆದು, ನಿನ್ನನು ಅವುಗಳ ನಾಯಕನನು ಮಾಡಿ ಮೆರೆಯಿಸಿರುವೆವು! ನಾಲ್ಕು ಕೈ ಚಕ್ರಾದಿಗಳನು ಕಲ್ಪಿಸಿ, ಚಂದ್ರ ನದಿ ಮುಂತಾದವುಗಳನು ತಲೆಯಲಿರಿಸಿ, ಹಾವಿನ ಹಾಸಿಗೆಯ ಮೇಲೆ ಮಲಗಿಸಿ, ಅತ್ತೂ ಇಲ್ಲದ ಇತ್ತೂ ಸಲ್ಲದ ವಿಚಿತ್ರ ಪ್ರಾಣಿಯನ ಮಾಡಿ ಪೂಜಿಸಿರುವೆವು! ಸಾಕಿನ್ನು ಈ ಹುಡುಗಾಟಿಕೆ, ಆಕಾರವಿಲ್ಲದವಗೆ ಆಕಾರವ ಕೊಟ್ಟು, ಗುಣಾತೀತನಿಗೆ ಗುಣಗಳನು ಕಲ್ಪಿಸಿ, ವಿವಿಧ ಕಥೆ ಕಾದಂಬರಿಗಳನು ಕಟ್ಟಿ, ನಾವು ದೇವನನು ನೋಡಿದೆವು, ನೋಡಿದೆವು ಎಂದು ಜಂಭ ಕೊಚ್ಚುವ ಮರುಳುಗಳು ನಮ್ಮಂತಹರು ನಾವೇ ಅಲ್ಲವೆ? ಇವುಗಳಲ್ಲಿಯೂ ನೀನಿರಬಹುದು, ಆದರೆ ಪ್ರಭುವೇ ನೀನಲ್ಲ, ಸರ್ವಥಾ ನೀನಲ್ಲವೆಂಬುದನು ನಾ ಬಲ್ಲೆ. ನೀನು ಆಕಾರಾತೀತ, ಗುಣಾತೀತ ನೀನು, ಸತ್ತು, ನೀನುಚಿತ್ತು, ನೀನು ಆನಂದ, ನೀನು ಆದಿಶಕ್ತಿ. ನಿನ್ನ ಕಟ್ಟುಗಳ

ಮುಖದಿಂದ ನಿನ್ನನ್ನು ನೋಡಬಲ್ಲೆವಲ್ಲದೆ ನಿನ್ನನ್ನು ಪ್ರತ್ಯಕ್ಷ ಕಾಣಲಾರೆವು, ಕಲ್ಪಿಸಲರಿಯೆವು. ನಿತ್ಯ ನಿರ್ಮಲಾನಂದವ ಪಡೆವಂತೆ ನಿನ್ನ ಕಟ್ಟಳೆಗಳನು ಪಾಲಿಸುವುದೆ ಪರಧರ್ಮದ ಚರಮಸೀಮೆಯಲ್ಲವೆ ಸ್ವಾಮಿ? ನಿನ್ನ ಕಟ್ಟಳೆಗಳನು ಚೆನ್ನಾಗಿ ಕಾಣಿಸಿ ಆನಂದದ ದಾರಿಯ ತೋರು, ಅಂತರಾತ್ಮ.

ಇದೇಕೆ ದೇವಾ, ನಿನ್ನಲ್ಲಿ ಅಷ್ಟೊಂದು ಕಠೋರತನವೇಕೆ? ಸ್ವಯಂವರಿಸಲು ಬಂದ ಉಪವರ ವಧುವನ್ನು ಇಷ್ಟೊಂದು ವಿರಹಪಡಿಸುವದೇಕೆ ನೀನು? ಇದರಲ್ಲಿ ನಿನಗೇನು ಸುಖ? ಈ ಪರಿ ಪಿಡಿಸುವ ನಿನಗೆ ಆದಾರು ಕರುಣಾನಿಧಿ ಎಂದು ಹೆಸರಿಟ್ಟವರು? ಅಹುದಹುದು, ಇದೇ ಆ ಸಂಕೇತಸ್ಥಾನ. ತಿಲದಷ್ಟು ಸಂಶಯವಿಲ್ಲ. ಅಯ್ಯೋ, ಇಲ್ಲಿಗೆ ಬರಲು ನನಗೆಯೆ ತಡವಾಗಿರಬಹುದೆ? ಇಷ್ಟರಲ್ಲಿ ನೀನು ಬಂದು ಸುಳಿದಾಡಿ ಹೋಗಬಹುದೆ? ಇಕೋ ಈ ಬನದಲ್ಲಿಯ ಮಾಟವಾದ ಹೆಜ್ಜೆಗಳು ನಿನ್ನವೆ ಅಲ್ಲವೇ? ಇಕೋ ಈ ಕತ್ತುರಿಯ ಪರಿಮಳವು ನಿನ್ನ ಮೃಗಂಪಲ್ಲವೆ? ಅಯ್ಯೋ, ಇಲ್ಲಿ ತಡೆದು, ಬೆಸತ್ತು, ಸಿಟ್ಟಾಗಿ ವನಮಾಲೆಯನು ಹರಿದೊಗೆದು, ಹೂಗಳನು ಚೆಲ್ಲಾಪಿಲ್ಲಿಮಾಡಿ ಪೋಗಿಬಿಟ್ಟಿರುವಿಯಾ? ಹೇ ಪ್ರಾಣೇಶ್ವರಾ, ನಾನೆಂಥ ಪಾಪಿ, ನಾನೆಂಥ ಚಾಂಡಾಲಿ! ಎನ್ನ ಈ ಸುಟ್ಟ ದೇಹವನು ಸಿಂಗರಿಸುವದರಲ್ಲಿಯೇ ವೇಳೆಯ ಹಾಳು ಮಾಡಿ ಈ ದೆಸೆಗೀಡಾದೆನಲ್ಲ! ಯುಗಕ್ಕೊಮ್ಮೆ ಬರುವ ಕ್ಷಣವನು ಕಳಕೊಂಡೆನಲ್ಲ! ದೇವನನು ಕಳೆದುಕೊಂಡು, ಹಾ ದೈವಾ, ಎಂದು ಬಾಯಿ ಕಿಸಿದು ಕೂಡುವಂತಾಯಿತು ಎನ್ನ ಗತಿ. ಪ್ರಿಯ ದೇವಾ, ಎಂದೋ ಇನ್ನೆಂದೊ ಮತ್ತೆ ಆ ಕ್ಷಣ ಬರುವದು? ಇನ್ನೆಲ್ಲಿ ಹುಡುಕಲಿ ಮತ್ತೆ ನಿನ್ನನು ಅಂತರಾತ್ಮಾ?

ಆಹಾ ಎತ್ತೆತ್ತಲೂ ಆನಂದ, ನಿತ್ಯ ನಿರ್ಮಲಾನಂದದ ಸುಗ್ಗಿ, ಎಲ್ಲೆಲ್ಲಿಯೂ ನಲುಮೆಗಳ ನಲಿನಲಿದಾಟ, ಆದರೆ ನನ್ನ ಪಾಲಿಗೇನು? ಸ್ವಚ್ಛ ಸರೋವರದೆಡೆಗೆ ನಿಂತು ನೀರಡಿಸಿ ಬಳಲುತಿರುವ ಾಪಿ ನಾನು! ಬೆಳಕಿನ ಬಯಲ ಬಳಿಯಲಿ ಇದ್ದು ಗವಿಯ ಕತ್ತಲೆಯನನುಭೋಗಿಸುತಿರುವ ಮರುಳ ಮಾನವನು ನಾನು! ಅಯ್ಯೋ ಸ್ವಾಮೀ. ಸುತ್ತಲೂ ಇದ್ದು ಕೈಸಾರಲೊಲ್ಲದು. ಳಿಯಲ್ಲಿದ್ದು ಬಳಸಲಿಕ್ಕೆ ಬರಲೊಲ್ಲದು, ಕೈಯ ತುತ್ತು ಾಯಲಿ ಬೀಳಲೊಲ್ಲದು, ಇದೇನು? ಮಗ್ಗುಲಲಿದ್ದ ಮಡದಿ ಯನು ಮುದ್ದಾಡದಂತಾಯ್ತೆನ್ನ ಪಾಡು! ಇದೆಂತಹ ವಿರಹವ ೊಡ್ಡಿದೆ ಈ ಒಡಲಿಗೆ ದೇವಾ? ಹೀಗೇಕೆ ಒಡೆಯಾ. ಹೀಗೇಕೆ? ಅಯ್ಯೋ ನಾನು ಎಂಬ ಕಾಳಛಾಯೆ ಕಾಡುತಿದೆ ಎನ್ನನು, ಾಮುವೆಂಬ ಮೋಹ ಮುಸುಕಿದೆ ಎನ್ನನು! ಇವೆರಡನು ಮೆಟ್ಟಿ ದೊಡೆ ಮಾತ್ರ ಸರಸ ಸಮ್ಮೇಳದ ಸಾಮ್ರಾಜ್ಯವು ಸ್ಥಿರವಾಗ ಲ್ಲದು ಈ ಹೃದಯದಲಿ, ಅನಂತ ಆನಂದಸ್ರೋತದಲಿ ಮುಳುಗುವದು ಈ ಜೀವನ, ಅಮೃತವನುಂಡುಂಡು ತಣಿಯ ಲ್ಲದು ಈ ಜೀವ. ಹೀಗಾಗುವ ಆಶೆಯಿದೆಯೆ ದೊರೆಯೇ ಂದಾದರೂ ಎನಗೆ? ಹೀಗೆ ಒಮ್ಮೆಯಾದರೂ ಎನ್ನನು ತಣಿಸುವಿಯಾ. ಅಂತರಾತ್ಮಾ?

ಅದಾವ ದುಷ್ಟ ದಿನವದು, ನೀನು ಎನ್ನನು ನಿನ್ನ ಹೃದಯಕಮಲದಿ ದೂಡಿ ತಳ್ಳಿ ಬಿಟ್ಟುದು? ಅಯ್ಯೋ! ಅಂದಿನಿಂದಿಂದಿನವರೆಗೆ ಭೂಮಂಡಲ ದಲಿ ಚಂಚಲಯಾತ್ರಿಯಾಗಿ ಬಳಲುತಿರುವೆ. ನಲ್ಲ ನಾಲಿಂಗನದಲಿರುವ ಅರಿಸಿಣ ತೊಡೆದ ನವವಧುವಿನಂತೆ, ಹೊನ್ನ ಹುಡಿಯನು ಹೂಸಿಕೊಂಡು ನಿನ್ನ ಹೃದಯಗರ್ಭದ ಬಂಡನುಣ್ಣುತ ನಾನು ಸುಖಕುಸುಮದ ಶಿರೋಭಾಗದಲಿದ್ದೆ. ಅಯ್ಯೋ, ಯಾವ ಕೆಟ್ಟ ಕ್ಷಣವದು? ನೀನು ಆ ದಿನ ಅದೇಕೆ ಸಿಟ್ಟಾದೆಯೊ ನಾ ತಿಳಿಯೆ, ಅದಾವ ಅಪರಾಧವ ಆಗ ನಾ ಮಾಡಿದೆನೊ ಅರಿಯೆ. ಮನೆಮಾರು ಕಳಕೊಂಡ ಮರಮರ ಮರುಗುವ ಅನಾಥನಂತೆ ಈಗ ಕೈಮೀರಿ ಹೋದುದರ ಕನಸನು ಕಂಡು ಕನವರಿಸುತ್ತ ಅಲ್ಲಿ ಇಲ್ಲಿ ಸುಖಲೇಶವನರಸುತ ಪಿರಿ ಪಿರಿ ತಿರುಗುತಿರುವೆ ನಾನು. ಗಾಳಿಗೊಡ್ಡಿದ ತರಗೆಲೆ ಯಂತೆ, ಸೆಳವಿಗೆ ಸಿಕ್ಕ ಮೀನದಂತೆ, ಕರ್ಮಜಾಲದಲಿ ತೊಡ ಗಿದ ಬಡಜೀವದಂತೆ ಎತ್ತ ಹೊರಟಿರುವೆನೊ ಎಂದು ಪಾರಾಗುವೆನೊ ನಾ ಕಾಣೆ. ಕರುಣಾಕಾರಾ, ಕರುವಿಗೆ ತನ್ನ ತಾಯಿಯ ಬಳಿಯನು, ಕೂಸಿಗೆ ಹೆತ್ತವಳ ಮಗ್ಗುಲವನು ಪ್ರಿಯೆಗೆ ಪ್ರಿಯನ ಸಂಗವನು ಸಾಧಿಸಿ ಕೊಡಲು ಸಮರ್ಥನು ನೀನೇ. ನನ್ನನು ನಿನ್ನೆತ್ತ ಬರಮಾಡಿಕೊಂಡು ಒಮ್ಮೆ ಉದ್ಧ ರಿಸ ಬಾರದೆ ಅಂತರಾತ್ಮಾ.

ಆಹಾ! ಇದುವೆ ಆನಂದ, ಇದುವೆ ಆನಂದ, ಇದುವೆ ನಿರಾಲಂಬ ಆತ್ಮಾನಂದ, ನಿತ್ಯಾನಂದ, ಆನಂದವೆ ಆನಂದ. ಕರ್ಮವೃಕ್ಷದ ಮೃದು ಮಧುರ ಫಲವಿದು, ಸಾಧನ ಕುಸುಮದ ಸುಗಂಧಮಯ ಸುಧೆಯಿದು, ಜೀವನದ ನಿಜ ಸಾರ ಸರ್ವಸ್ವವಿದು, ನರಜನ್ಮವ ಸಾರ್ಥಕಗೊಳಿಸುವ ಅಮೃತ ಧಾರೆಯಿದು. ನಿಸರ್ಗಶಿಶುವನು ಶಾಂತವಾಗಿ ಮಲಗಿಸುವ ನಿಶೆಯಂತೆ, ವನಸ್ಪತಿವರ್ಗಕೆಲ್ಲ ಸೋಮವನೆರೆಯುವ ಚಂದಿರನಂತೆ, ಮಾನವಹೃದಯಗತ ಹಂಬಲಗಳನೆಲ್ಲ ದಣಿವಂತೆ ತಣಿಸಿ ನವಜೀವನ ಸಾಮರ್ಥ್ಯವನು ಈಯುವದು ಈ ಆನಂದ, ಆಹಾ, ನಡು ಇರುಳಿನ ಶಾಂತಿಯಲಿ ಎನ್ನಂತರಂಗದ ನಡುವೆ ನಿಂತು ಬೆಳ್ಳಿಯ ಸೋನೆಯ ಕರೆಯುವ ಎನ್ನ ಆನಂದ ಚಂದ್ರನೇ, ಕಲ್ಪ ಕಲ್ಪಾಂತಗಳಿಂದ ತಪಿಸುತ ತಡೆದಿದ್ದೆ ನಾ ನಿನ್ನ ದಿವ್ಯ ಶುಭದರ್ಶನಕ್ಕಾಗಿ. ಈಗ ಫಲಿಸಿತೆನ್ನಬೇಕು ಎನ್ನ ಅಲ್ಪ ಸುಕೃತ. ನಾನೆಂತು ಬಣ್ಣಿಸಬಲ್ಲೆ ಎನ್ನ ಧನ್ಯಭಾವವನು? ಈ ಸ್ಥಿತಿಯನೆ ಸ್ಥಿರವಾಗಿರಿಸು, ದೇವಾ. ಇದನೆ ಎನ್ನ ಎಚ್ಚರದ ತಳಹದಿಯಾಗಿ ನಿಲ್ಲಿಸು. ಇದುವೆ ಎನ್ನ ಜೀವಭಾವಗಳ ಆಧಾರವಾಗಲಿ, ಇದುವೆ ಎನ್ನ ಕರ್ಮಪ್ರೇರಕ ಶಕ್ತಿಯ ಮಾಡಿ ಎನ್ನನು ಆಡಿಸು ನಲಿದಾಡಿಸು ಈ ವಿಶ್ವಲೀಲೆಯಲಿ, ಅಂತರಾತ್ಮಾ.

ಶಬ್ದಾರ್ಥ

ಅಂತರ್ಮಥನ : ಮನಸಿನಲ್ಲಿಯ ವಿಚಾರಗಳ ತಿಕ್ಕಾಟ
ಅಟ್ಟುಂಬ: ಹೆಚ್ಚು ಉಣ್ಣುವ
ಅಡಸು : ಗಂಟುಬೀಳು
ಅಪರಂಜಿ : ಶುದ್ಧ ಚಿನ್ನ
ಅಭಿಪ್ರಾಣ : ಬಡಪ್ರಾಣ
ಅರಗಿಸು : ಪಚನಮಾಡು
ಅರಸು : ಹುಡುಕು
ಅಲಗು : ಕತ್ತಿ
ಅಹಂನಾದ : 'ಅಹಂ ಅಹಂ' ಎಂಬ ನಾದ, ಅಹಂಕಾರ
ಅಳವಡು : ಕೈಗೆ ಬರು, ಸೆರೆಗೊಳ್ಳು
ಅಳವು : ಸಾಮರ್ಥ್ಯ
ಅಳವೇ : ಶಕ್ಯವೇ, ಬರುವದೇ
ಅಳಲು : ದುಃಖ
ಅಳಿ : ನಾಶಹೊಂದು; ಹೀನ
ಆಗಸ : ಆಕಾಶ
ಆಣತಿ : ಆಜ್ಞೆ
ಆತ್ಮಗುಣ : ಸಾತ್ವಿಕ ಗುಣಗಳು

ಆರ್ತ : ದುಃಖಪೂರ್ಣ, ದುಃಖಿತ
ಆಸರ : ಆಶ್ರಯ
ಇಕ್ಕು : ಇಡು, ಹಾಕು
ಉಣ್ಣಗೂಳಿ : ತಿನಸುಬಕ್ಕ
ಎಡರು ದುಃಖ, ಕಷ್ಟ
ಎದುರಿಗ : ಶತ್ರು
ಎರಚು : ಚೆಲ್ಲು, ಎರಿಸು, ಆರ್ಪಿಸು
ಎಸಗು : ಮಾಡು
ಎಸೆ : ಒಗೆ
ಒಗೆದು : ಹುಟ್ಟಿಸಿ, ಹೊರಗೆ ಹಾಕಿ
ಒಲುಮೆ : ಪ್ರೀತಿ, ಅನುಗ್ರಹ
ಓಲಗ : ದರಬಾರು
ಕಟ್ಟು : ನಿಯಮ
ಕಣಸು : ದಿವ್ಯದರ್ಶನ
ಕತ್ತುರಿ : ಕಸ್ತೂರಿ
ಕನವರಿಸು : ಕನಸಿನಲ್ಲಿ ಬಡಬಡಿಸು
ಕರಣಂಗಳು : ಇಂದ್ರಿಯಾದಿ ಸಾಧನಗಳು

ಕವಾಟ : ಬಾಗಿಲು
ಕಾತರಗೊಳ್ಳು : ದುಃಖಪಡು, ಆರ್ತನಾಗು
ಕಾಯುಲಮ್ಮನೆ : ಕಾಯುಲು ಸಮರ್ಥನೇ ?
ಕೂಟ : ಸಂಗ, ಕೂಡುವಿಕೆ
ಕೆನ್ನೀರು : ರಕ್ತ
ಕೈದು : ಶಸ್ತ್ರ
ಕೊಳೆ : ಹೊಲಸು, ಮಲ
ಗಂಟುಕಳ್ಳ : ಗಂಟು ಕಳವು ಮಾಡುವವ
ಗದ್ದುಗೆ : ಕಟ್ಟೆ, ಪೀಠ
ಗಾಸಿಯಾಗು : ದುಃಖಪಡು, ಗಾಸಿಹೊಂದು
ಚಾಗಿ : ತ್ಯಾಗಿ
ಜರೆ : ಹೇಳು
ಜಿಪುಣ : ಜೀನ, ಜಿಬಟ
ತಂಗೈ : ತಂಪಾದ ಕೈ
ತಡೆಯುಲಾಪೆನೆ : ತಡೆಯುಲು ಸಮರ್ಥನೆ?
ತಣಿಸು : ಸಮಾಧಾನಪಡಿಸು
ತರಗೆಲೆ : ಒಣ ಎಲೆ
ತವಕ : ಆತುರತೆ
ತಳಕು : ತೊಡಕು
ತೊಡೆ : ನಾಶಗೊಳಿಸು
ತೊತ್ತು : ಆಳು
ತೊರೆ : ಬಿಡು, ಪ್ರವಾಹ

ತೊಳಗು : ಮಿಂಚು
ತೊಳಲು : ದುಃಖಪಡು
ದಿಟ, ಸಟೆ : ಸತ್ಯ ಮತ
ದೆಸೆ : ಸ್ಥಿತಿ
ನಚ್ಚು : ವಿಶ್ವಾಸ, ಶ್ರದ್ಧೆ
ನಲ್ಲ : ಪ್ರೇಮಪುರುಷ
ನಲಿದಾಡು : ಆನಂದಪಡು
ನಲುಮೆ, ನಲ್ಮೆ : ಪ್ರೀತಿ
ನಿನ್ನಾಳವನು : ನಿನ್ನ ನಿಜ ಶಕ್ತಿ
ಪೆರ್ದೊರೆ : ಹಿರೇ ಪ್ರವಾ
ಬಂಡು : ಮಿಷ್ಟಾನ್ನ
ಬಳಸು : ಉಪಯೋಗಿಸು
ಬಳಿಸಾರು : ಹತ್ತಿರ ಬರು
ಬೀಡಿಗೆ ಎಡೆಮಾಡು : ಮ ಯಲ್ಲಿ
ಬೀಗು : ಬಾಡಿಹೋಗು,
ಬೆಂಬಳಿಸಿ : ಬೆನ್ನುಬಿದ್ದು, ಬೆನ್
ಬೆಸಸು : ಹೇಳು, ಆಜ್ಞಾ
ಬೊಕ್ಕಸ : ಧನದ ಕೋಶ
ಮಡಲು : ತೊಡೆ
ಮಣಿಹ : ಕಾರ್ಯ, ಕರ್ತ
ಮದ್ದು : ಔಷಧ
ಮರಗು : ದುಃಖಪಡು

ಮರುಜೀವಣ : ಸಂಜೀವನಿ

ಮರಳು : ತಿರಗು

ಮಾರಿ : ಘಾತಕ

ಮಿನುಗು : ಮಿಂಚು

ಮಿಯಿಸು : ಸ್ನಾನ ಮಾಡಿಸು

ಮುಕ್ತಿದ : ಮುಕ್ತಿ ಕೊಡುವ

ಮುಡಿ : ತಲೆಯಲ್ಲಿ ಹೂ ಇಟ್ಟುಕೊಳ್ಳು

ಮುಳುವು : ಕಂಟಕ

ಮೈವೆತ್ತ : ರೂಪುಗೊಂಡ

ಮೊರೆಯಿಡು : ಪ್ರಾರ್ಥಿಸು, ಕೇಳಿಕೊಳ್ಳು

ರುಜೆ : ಜಡ್ಡು

ರೋಷ : ಸಿಟ್ಟು, ಕೋಪ

ವಿಟ : ಸ್ವೈರಪುರುಷ

ವೇಶಿ : ವೇಶ್ಯ, ಪಣ್ಯಸ್ತ್ರೀ

ಶ್ರಾಂತ : ದಣಿದ

ಸಂಕುಲ : ಸಮೂಹ

ಸಂದೋಹ : ಸಮೂಹ

ಸರಿತ್ತು : ನದಿ, ಹೊಳೆ

ಸೂರೆಗಾರ : ಲೂಟಿ ಮಾಡುವವ

ಸುಳಿವು : ಸಣ್ಣ ಪ್ರವಾಹ

ಸೊತ್ತು : ಸಂಪತ್ತಿ

ಸೊಮ್ಮು : ಸಂಪತ್ತು

ಸೊಲ್ಲು : ಮಾತು

ಹರಣಕ್ಕೆ : ಜೀವಕ್ಕೆ

ಹಳಸಿಸು : ಕೆಡಿಸು

ಹೀಯಾಳಿಸು : ಧಿಕ್ಕರಿಸು

ಹುಮ್ಮಸ : ಹುರುಪು

ಹುಲುಸು : ಫಲಕೊಡುವಂತಹ

ಹೆಣಗು : ಪ್ರಯತ್ನಪಡು

ಹೇಯ ತಿರಸ್ಕಾರಕ್ಕೆ ಯೋಗ್ಯ

ಹೊಡೆಗೆಡು : ನಮಸ್ಕಾರ ಮಾಡು

ಹೊಡೆಗೆಡಿಸು : ಅಪಮಾನಿಸು, ಹಣ್ಣಿಸು

ಹೊಲ್ಲ : ಕ್ಷುದ್ರ, ದುಷ್ಟ